ವಾಗೀಶ್ವರಿ ಶಾಸ್ತ್ರಿ

ವ್ಯಕ್ತಿ ಪರಿಚಯ



ಕರ್ನಾಟಕ ಜಾನಪದ ಪರಿಷತ್ತು
ಬೆಂಗಳೂರು

ಪ್ರೊ. ಡಿ. ಲಿಂಗಯ್ಯ

ಜನಪ್ರಿಯ ಜಾನಪದ ಪುಸ್ತಕ ಮಾಲೆ – ೪೬

ವಾಗೀಶ್ವರಿ ಶಾಸ್ತ್ರಿ

ವ್ಯಕ್ತಿ ಪರಿಚಯ

ಪ್ರೊ. ಡಿ. ಲಿಂಗಯ್ಯ

ಕರ್ನಾಟಕ ಜಾನಪದ ಪರಿಷತ್ತು
ನಂ.1, ಜಲದರ್ಶಿನಿ ಲೇ ಔಟ್,
ಎಂ. ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ,
ಹೊಸ ಬಿ.ಇ.ಎಲ್. ರಸ್ತೆ, ಬೆಂಗಳೂರು – 560 054

VAGEESHWARI SHASTRI-
A pen portrait - by Prof. D. Lingaiah.
Published by : KARNATAKA JANAPADA PARISHATHU,
No.1, Jaladarshini Layout (Near M.S. Ramaiah Hospital Gate),
New B.E.L. Road, Bengalooru - 560 054. Ph : 080-23605033.
Pages : 32 Price : Rs. 10 2010.

ಪ್ರಥಮ ಮುದ್ರಣ ೨೦೧೦

ಪ್ರತಿಗಳು ೨೦೦೦

ಪುಟಗಳು ೩೨

ಬೆಲೆ ರೂ.೧೦ (ಹತ್ತು ರೂಪಾಯಿ)

ಮುದ್ರಕರು
ಕೃತಿಕ ಪ್ರಿಂಟ್-ಆ್ಯಡ್
ನಂ. 58, 1ನೇ ಕ್ರಾಸ್, ಜೆ.ಕೆ. ಪುರಂ
ವಿನಾಯಕನಗರ, ಆಡುಗೋಡಿ ಪೋಸ್ಟ್
ಬೆಂಗಳೂರು - 560 030
ಮೊಬೈಲ್ - 98441 14958

ಅಧ್ಯಕ್ಷರ ಮಾತು

ಕರ್ನಾಟಕ ಜಾನಪದ ಪರಿಷತ್ತಿನ ಹಲವು ಯೋಜನೆಗಳಲ್ಲಿ ಜನಪದ ಪುಸ್ತಕ ಪ್ರಕಟಣೆ ಒಂದು. ಇದರಲ್ಲಿ ವಿದ್ವತ್ ಗ್ರಂಥಗಳ ಪ್ರಕಟಣೆಗಳೇ ಹೆಚ್ಚು. ಇವುಗಳ ಜೊತೆಗೆ 'ಜನಪ್ರಿಯ ಜಾನಪದ ಪುಸ್ತಕ ಮಾಲೆ' ಯನ್ನು ಪ್ರಾರಂಭಿಸಿದೆ. ಜಾನಪದವನ್ನು ಜನಸಾಮಾನ್ಯರಿಗೆ ತಲುಪಿಸುವುದು ಇದರ ಮುಖ್ಯ ಉದ್ದೇಶ. ಇದರಲ್ಲಿ ಜಾನಪದಕ್ಕೆ ದುಡಿದಿರುವ, ದುಡಿಯುತ್ತಿರುವ ಕಲಾವಿದರು, ಕಲೆಗಳು, ಸಂಗ್ರಾಹಕರು, ವಿದ್ವಾಂಸರು, ಸ್ವಾರಸ್ಯಕರವಾದ ಉಪಯುಕ್ತವಾದ ಜನಪದ ಗೀತಸಾಹಿತ್ಯದ ಸೋದಾಹರಣ ವ್ಯಾಖ್ಯಾನ – ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ, ನಾಡಿನ ಪ್ರಸಿದ್ಧ ಸಾಹಿತಿ ಸಂಶೋಧಕರಿಂದ ಕಿರುಗ್ರಂಥಗಳನ್ನು ಬರೆಯಿಸಿ, ಪ್ರಕಟಿಸಿ, ಕೇವಲ ಹತ್ತು ರೂಪಾಯಿ ಬೆಲೆಗೆ ಒದಗಿಸಲು ಯೋಜಿಸಿದೆ. ಕಡಿಮೆ ಅವಧಿಯಲ್ಲಿ ಓದಿಕೊಳ್ಳಬಹುದಾದ ಈ ಗ್ರಂಥಗಳು ಹಲವು ಮಾಹಿತಿಗಳನ್ನು ಸಂಕ್ಷಿಪ್ತವಾಗಿ ತಿಳಿಯಪಡಿಸುತ್ತವೆ.

ಈ ಜನಪ್ರಿಯ ಪುಸ್ತಕ ಮಾಲೆಗೆ **ಪ್ರೊ. ಡಿ. ಲಿಂಗಯ್ಯ** ಅವರು **ವಾಗೀಶ್ವರಿ ಶಾಸ್ತ್ರಿ** ಅವರನ್ನು ಕುರಿತ ಗ್ರಂಥವನ್ನು ಬರೆದುಕೊಟ್ಟಿದ್ದಾರೆ. ಗ್ರಂಥದ ಲೇಖಕರಿಗೂ ಗ್ರಂಥ ಪ್ರಕಟಣಾ ಸಮಿತಿಯ ಸದಸ್ಯರಿಗೂ ಕೃತಜ್ಞತೆಗಳನ್ನು ಅರ್ಪಿಸಿ, ಸಹೃದಯರು ಈ ಪುಸ್ತಕವನ್ನು ಸ್ವಾಗತಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಬೆಂಗಳೂರು
೦೫-೦೨-೨೦೧೦

ನಾಡೋಜ ಡಾ. ಜಿ. ನಾರಾಯಣ
ಅಧ್ಯಕ್ಷರು
ಕರ್ನಾಟಕ ಜಾನಪದ ಪರಿಷತ್ತು

ವಾಗೀಶ್ವರಿ ಶಾಸ್ತ್ರಿ

ಸ್ವಾತಂತ್ರ್ಯ ಪೂರ್ವದ ದಿನಗಳು. ವಿದೇಶಿ ಸಂಸ್ಕೃತಿ ಸ್ವದೇಶಿ ಸಂಸ್ಕೃತಿಯ ಮೇಲೆ ನಿರ್ಭಯವಾಗಿ ಸವಾರಿಮಾಡುತ್ತಿದ್ದ ಸಮಯ. ಅದು ಅನಿವಾರ್ಯವೆಂಬ ಭಾವನೆ ಗಟ್ಟಿಯಾಗುತ್ತಿದ್ದ ಪರಿಸ್ಥಿತಿ. ಸ್ವದೇಶಿ ಸನಾತನ ಸಂಸ್ಕೃತಿ ವ್ಯಕ್ತಿನಿಷ್ಠ ನೆಲೆಯಲ್ಲಿ ಉಸಿರಾಡುತ್ತಿದ್ದ ಕಾಲ. ಪರಕೀಯ ದಾಸ್ಯ ವಿಮೋಚನೆ ಮರುಮರೀಚಿಕೆ ಎಂಬ ಅಸಹಾಯಕತೆ. ಅದು ಅಖಂಡ ಭಾರತದ ವಿಷಯ ಸಂದರ್ಭವಾಗಿತ್ತು. ಅಂಥ ದುರ್ಬರ ಪ್ರಸಂಗದಲ್ಲೂ ಕನ್ನಡ ಮೌಖಿಕ ಪರಂಪರೆ ಜೀವಹಿಡಿದಿತ್ತು ಎಂಬುದು ವಿಸ್ಮಯಸಂಗತಿ. ಅದಕ್ಕೆ ಸಮಾಜದ ಎಲ್ಲಾ ಜನಾಂಗದ ಸ್ತ್ರೀಪುರುಷರ ಅವ್ಯಕ್ತ ಸಂಸ್ಕೃತಿ ಪ್ರೀತಿ ಕಾರಣ.

ಕರ್ನಾಟಕದ ಹಾಸನ ಜಿಲ್ಲೆಯ ಸಕಲೇಶಪುರದಲ್ಲಿ ಒಂದು ಸಾಂಪ್ರದಾಯಿಕ ಬ್ರಾಹ್ಮಣ ಕುಟುಂಬ. ಮುಲಕನಾಡು ಒಳಪಂಗಡದ ಸಂಸಾರ. ಎಸ್. ವೆಂಕಟೇಶಯ್ಯ ಮತ್ತು ಅನ್ನಪೂರ್ಣಮ್ಮ ದಂಪತಿಗಳು. ಅವರ ಏಳು ಮಕ್ಕಳಲ್ಲಿ ನಾಲ್ಕನೆಯ ಮಗಳು ವಾಗೀಶ್ವರಿ. ಜನನ ೨೬.೦೭.೧೯೨೬. ನಾಮಕರಣ ಮಾಡಿದ್ದು ಅಜ್ಜಿ ಕೊಣನೂರು ಸುಬ್ಬಮ್ಮ. ಅವರ ಕಣ್ಮರೆಯಾದ ಮಗಳ ಹೆಸರನ್ನು ನೆನಪಾಗಿ ಮೊಮ್ಮಗಳಿಗೆ ಇಟ್ಟಿದ್ದು. ನಾಲ್ಕನೇ ಮಗುವೂ ಹೆಣ್ಣಾದುದರಿಂದ ಹೆತ್ತ ತಾಯಿಗೆ ತುಸು ಬೇಸರ. ಆದರೆ ಅಜ್ಜಿಗೆ ಅಕ್ಕರೆ. ಹೆಣ್ಣುಮಗುವಿನ ಆರನೆಯ ವಯಸ್ಸಿಗೇ ತಾಯಿಯ ನಿಧನ (೧೯೩೩). ಅಜ್ಜಿಯ ಆಸರೆ, ಪೋಷಣೆ ಗಟ್ಟಿ. ತಂದೆ ವೆಂಕಟೇಶಯ್ಯ ಕಾಮಗಾರಿ ಇಲಾಖೆಯಲ್ಲಿ ಸಬ್ ಓವರ್‌ಸೀಯರ್. ಊರಿಂದೂರಿಗೆ ಅಲೆಯುವ

ತಾಬೇದಾರಿ ಕೆಲಸ. ಮಕ್ಕಳಿಗೂ ತಂದೆಯೊಡನೆ ಅಲೆದಾಡುವ ಪರಿಸ್ಥಿತಿ. ವಾಗೀಶ್ವರಿಯ ಒಡಹುಟ್ಟಿದವರು : ಪ್ರಸನ್ನ, ಪಾರ್ವತಿ, ಭಾಗೀರಥಿ, ಶೇಷಮ್ಮ, ಸರೋಜ, ವಿಶ್ವನಾಥ ಮತ್ತು ಸತ್ಯನಾರಾಯಣ.

ಗಂಡ ಮಂಜಯ್ಯನವರನ್ನು ಕಳೆದುಕೊಂಡ ಸುಬ್ಬಮ್ಮ ವಿಧವೆಯಾದರು (೧೯೩೧). ದೈಹಿಕವಾಗಿ ಮಾನಸಿಕವಾಗಿ ಸಾಮಾಜಿಕವಾಗಿ ಕುಗ್ಗಿದರು. ಅಂದು ವಿಧವೆಯ ಸ್ಥಿತಿ ಆಶಾದಾಯಕವಾಗಿರಲಿಲ್ಲ. ಕೇಶಮುಂಡನ, ಕೆಂಪುಸೀರೆ, ಅಡುಗೆ ಮನೆಯ ಒಂದು ಮೂಲೆಯ ವಾಸ. ಗೃಹಬಂಧನದ ವಾತಾವರಣ. ಏಕಾಂತ ಜೀವನ ಹಗುರಗೊಳಿಸಿಕೊಳ್ಳಲು ಮೊಮ್ಮಗಳು ವಾಗೀಶ್ವರಿಯನ್ನು ತಮ್ಮ ಬಳಿಯೇ ಇಟ್ಟುಕೊಳ್ಳಲು ತೀರ್ಮಾನ. ಅಗಾಧವಾದ ಜ್ಞಾಪಕಶಕ್ತಿಯಿದ್ದ ಮೊಮ್ಮಗಳಿಗೆ, ತಾವು ಕಲಿತಿದ್ದ ಸಂಪ್ರದಾಯದ ಹಾಡುಗಳನ್ನು ಕಲಿಸುವ ಬಯಕೆ. ಮೊಮ್ಮಗಳಿಗೂ ಕಲಿಯುವ ಆಸೆ. ಬೆಳಿಗ್ಗೆ ಸಂಜೆ ಎರಡೆರಡು ಗಂಟೆ ಮೌಖಿಕ ಹಾಡುಗಳ ಪಾಠ. ಪೂರ್ವದಿಕ್ಕಿಗೆ ಮುಖಮಾಡಿ ಕೂರಬೇಕು. ಅಜ್ಜಿ ಹಾಡುವುದನ್ನು ಕೇಳಬೇಕು. ಅಜ್ಜಿಯ ಬಾಯಿಯನ್ನು ಗಮನಿಸಬೇಕು. ಅಜ್ಜಿ ಹ್ಞೂ ಅಂದಾಗ ಬಾಯಿತೆರೆದು ಹಾಡಬೇಕು. ಕಲಿತಿದ್ದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಏಕಾದಶಿ, ಶಿವರಾತ್ರಿ, ಋಷಿಪಂಚಮಿ ಜಾಗರಣೆ ಸಮಯದಲ್ಲಿ ಉಪವಾಸವಿದ್ದು, ಶ್ರದ್ಧೆಯಿಂದ ನೆರೆದ ಮಹಿಳೆಯರ ಮುಂದೆ ಹಾಡಿ ಸೈ ಎನಿಸಿಕೊಳ್ಳಬೇಕು. ಅಜ್ಜಿ ಹೇಳಿಕೊಟ್ಟ ಹಾಡಿನ ನೆಲೆಯನ್ನು ರಾಗವನ್ನು ಕರಗತಮಾಡಿಕೊಳ್ಳುವುದು ಸಲೀಸಾಯಿತು. ಐದನೆಯ ವಯಸ್ಸಿಗೇ 'ಬಬ್ರುವಾಹನ ಕಾಳಗ' ದಂತಹ ಯಕ್ಷಗಾನ ಕಾವ್ಯ ಕಂಠಪಾಠವಾಯಿತು. ಯಾವ ಭಯವಿಲ್ಲದೆ ಸರಾಗವಾಗಿ ಹಾಡುವ ಧೈರ್ಯ ಬಂತು. ಅಜ್ಜಿಯ ಹಾಡುಗಳೆಲ್ಲ ಮೊಮ್ಮಗಳ ಸ್ವತ್ತಾದವು.

ಅಜ್ಜಿಯಲ್ಲಿದ್ದ ಹಾಡುಗಳನ್ನೆಲ್ಲಾ ಕಲಿತಮೇಲೆ, ಮುತ್ತಜ್ಜಿ ಶೇಷಮ್ಮನವರಲ್ಲಿದ್ದ ಹಾಡುಗಳನ್ನೂ ಅಕ್ಕಪಕ್ಕದ ಮಹಿಳೆಯರಲ್ಲಿದ್ದ ಹಾಡುಗಳನ್ನೂ ಕಲಿತು ನೆನಪಿಟ್ಟುಕೊಳ್ಳುವ ಹುರುಪು ಹೆಚ್ಚಿತು. ವೈವಿಧ್ಯಮಯವಾದ ಹಾಡುಗಳು ಹೃದ್ಗತವಾದವು. ಸಂಬಂಧಿಕರ ಮನೆಯಲ್ಲಿ ಹೆಣ್ಣು ಋತುಮತಿಯಾದರೆ, ಬಸುರಿಯಾದರೆ, ಮಕ್ಕಳ ನಾಮಕರಣವಾದರೆ, ಹಬ್ಬ ಹರಿದಿನವಾದರೆ ಹೋಗಿ ಸಂದರ್ಭಕ್ಕೆ ತಕ್ಕಂತೆ ಧಾರ್ಮಿಕ ಹಾಡುಗಳನ್ನು ಹಾಡುವ ಪರಿಪಾಠ ಉಂಟಾಯಿತು. ಪುಟ್ಟ ಹುಡುಗಿಯ ಹಾಡುಗಾರಿಕೆಗೆ ಹಿರಿಯರು ಮೆಚ್ಚಿ ತಲೆದೂಗಿದರು.

ಬಾಲಕಿ ವಾಗೀಶ್ವರಿಗೆ ಅಜ್ಜಿಯ ಮನೆಯಲ್ಲಿದ್ದಾಗ ಪ್ರಾಥಮಿಕ ಶಿಕ್ಷಣ ಪ್ರಾರಂಭವಾಯಿತು. ಮನೆಯಲ್ಲಿ ಅಜ್ಜಿಯಿಂದ ಸಾಂಪ್ರದಾಯಿಕ ಹಾಡುಗಳ ಶಿಕ್ಷಣ, ಹೊರಗೆ ಶಾಲೆಯಲ್ಲಿ ಆಧುನಿಕ ಶಿಕ್ಷಣ. ತಂದೆಗೆ ಮಂಡ್ಯಕ್ಕೆ ವರ್ಗವಾಯಿತು (೧೯೩೭). ತಂದೆಯೊಡನೆ ಮಂಡ್ಯಕ್ಕೆ ಬಂದ ವಾಗೀಶ್ವರಿ ಮಂಡ್ಯದಲ್ಲಿ ಪ್ರಾಥಮಿಕ ನಾಲ್ಕನೇ ತರಗತಿಗೆ ಸೇರಿ, ಅನಂತರ ಮಾಧ್ಯಮಿಕ ಶಾಲೆಯ ಶಿಕ್ಷಣವನ್ನೂ ಮುಗಿಸಿದಳು. ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ತೇರ್ಗಡೆಯಾದಳು. ಮಂಡ್ಯದಲ್ಲಿ ಸಂಗೀತ ಅಭ್ಯಾಸವನ್ನೂ ಮಾಡಿದಳು. ಕಾರಣಾಂತರದಿಂದ ಹೆಚ್ಚು ವಿದ್ಯಾಭ್ಯಾಸ ಮಾಡಲು ಆಗಲಿಲ್ಲ.

ಮಂಡ್ಯದಲ್ಲಿ ಹೊಸಹಳ್ಳಿ ಬಡಾವಣೆಯಲ್ಲಿ ಮಹಿಳಾ ಸಮಾಜವಿತ್ತು. ಬಿ.ಎಂ. ಶ್ರೀಕಂಠಯ್ಯನವರ ಕೊನೆಯ ಸಹೋದರ ಕೃಷ್ಣಸ್ವಾಮಿಯವರ ಹೆಂಡತಿ ತಂಗಮ್ಮ ಸಮಾಜದ ಕಾರ್ಯದರ್ಶಿ. ಅವರ ಹೆಣ್ಣುಮಕ್ಕಳು ಪ್ರಭಾವತಿ, ಲೇಖಕಿಯರಾದ 'ತ್ರಿವೇಣಿ' ಮತ್ತು ಆರ್ಯಾಂಬ. ತ್ರಿವೇಣಿಯವರಿಗೆ ಅಸ್ತಮಾ ಖಾಯಿಲೆಯಿತ್ತು. ಅವರು ಚುರುಕಾಗಿರಲಿಲ್ಲ. ಆದರೆ ಪ್ರಭಾವತಿ ಲವಲವಿಕೆಯಿಂದಿದ್ದರು. ಆಕೆ ವಾಗೀಶ್ವರಿ ಅವರ ಸಹಪಾಠಿ. ಮಂಡ್ಯದ

ಮುನ್ಸಿಪಲ್ ಹೈಸ್ಕೂಲಿನಲ್ಲಿದ್ದಾಗ ಜಿ. ವೆಂಕಟಸುಬ್ಬಯ್ಯನವರು ಅಧ್ಯಾಪಕರಾಗಿದ್ದರು.

ಮಂಡ್ಯದ ಮಹಿಳಾ ಸಮಾಜ ಹಲವು ಸಾಂಸ್ಕೃತಿಕ ಸಂಗೀತ ಕಾರ್ಯಕ್ರಮಗಳನ್ನು ನಡೆಸುತ್ತಿತ್ತು. ಹಾಡಿನ ಕಾರ್ಯಕ್ರಮಗಳಲ್ಲೆಲ್ಲಾ ವಾಗೀಶ್ವರಿ ಇರುತ್ತಿದ್ದರು. ಆಗ ಅಭಿನಯಿಸುತ್ತಿದ್ದ ಪೌರಾಣಿಕ ನಾಟಕಗಳಲ್ಲಿ ನಾರದನ ಪಾತ್ರ ಅಭಿನಯಿಸುತ್ತಿದ್ದರು. ಇಂಪಾಗಿ ಹಾಡುತ್ತಾಳೆ ಅಂತ ನಾರದನ ವೇಷ ಸಿಗುತ್ತಿತ್ತು. ಮಂಡ್ಯದಲ್ಲಿ ನಡೆದ ವಕೀಲರ ಸಮ್ಮೇಳನ ಮೊದಲಾದ ಸಭೆ ಸಮಾರಂಭಗಳಲ್ಲಿ ವಾಗೀಶ್ವರಿಯ ಹಾಡುಗಾರಿಕೆ–ಮುಖ್ಯವಾಗಿ ಪ್ರಾರ್ಥನಾಗೀತೆ–ಇರುತ್ತಿತ್ತು.

ಮಂಡ್ಯ ಜಿಲ್ಲೆಯ ಪ್ರಾರಂಭೋತ್ಸವ. ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರಿಂದ ಉದ್ಘಾಟನೆ, ಆ ಸಭೆಯಲ್ಲಿ ವಾಗೀಶ್ವರಿ ಮಹಾರಾಜರ ಸ್ತುತಿಗೀತೆಯನ್ನು ಪ್ರಾರ್ಥನಾ ಗೀತೆಯಾಗಿ ಹಾಡಿದರು:

'ಯದುವಂಶ ನೃಪಲಲಾಮನ ಜಯ ಹೇ
ನಾಲ್ವಡಿ ಕೃಷ್ಣ ನೃಪಾಲ.....'

ಅದು 'ಜನಗಣಮನ ಅಧಿನಾಯಕ ಜಯ ಹೇ' ಧಾಟಿಯ ಹಾಡು. ಹಾಡನ್ನು ಕೇಳಿ ಮೆಚ್ಚಿ, ಸಭೆಗೆ ಬಂದಿದ್ದ ಕಾಂತರಾಜೇ ಅರಸ್ ಅವರು ಅರಮನೆಯಲ್ಲಿ ಬಂದು ಹಾಡಬೇಕು ಎಂದರು. ವಾಗೀಶ್ವರಿ ಹೆದರಿಕೊಂಡು ಅರಮನೆಗೆ ಬರುವುದಿಲ್ಲ ಎಂದರು!

ಮಂಡ್ಯ ಜಿಲ್ಲಾ ಆಸ್ಪತ್ರೆಯನ್ನು ದಿವಾನ್ ಮಿರ್ಜಾ ಉದ್ಘಾಟಿಸಿದರು. ಅಂದಿನ ಕಾರ್ಯಕ್ರಮದಲ್ಲೂ ವಾಗೀಶ್ವರಿ ಸುಶ್ರಾವ್ಯವಾಗಿ ಹಾಡಿ ಮೆಚ್ಚುಗೆ

ಗಳಿಸಿದರು. ಅವರ ಬಾಲಪ್ರತಿಭೆಗೆ ಮಂಡ್ಯದ ಹಲವು ಸಾಂಸ್ಕೃತಿಕ ಕಾರ್ಯಕ್ರಮಗಳು ಇಂಬಾದವು. ಅವರಿಗೂ ಅವರ ಅಜ್ಜಿ ಸುಬ್ಬಮ್ಮನವರಿಗೂ ಮಂಡ್ಯದ ಪ್ರಾಚೀನ ಅಶ್ವತ್ಥವೃಕ್ಷವೊಂದು ಸನಾತನ ಸಂಸ್ಕೃತಿಯ ಸಂಕೇತವಾಗಿ ನೆನಪಿನಲ್ಲಿ ಉಳಿಯಿತು.

ವಾಗೀಶ್ವರಿ ಅವರಿಗೆ ಹದಿನಾಲ್ಕನೇ ವಯಸ್ಸಿಗೆ ಮದುವೆಯಾಯಿತು (೧೯೪೦). ಆಗ ಬಾಲ್ಯವಿವಾಹದ ಕಾಲ. ಅಜ್ಜಿ ಸುಬ್ಬಮ್ಮನವರೇ ನಿಂತು ಮದುವೆ ಮಾಡಿದರು. ಮೈಸೂರು ಅರಮನೆ ವಿದ್ವಾಂಸರಾಗಿದ್ದ ಹರಿಕಥೆ ವಿದ್ವಾನ್ ಕೋಣನೂರು ಶ್ರೀಕಂಠಶಾಸ್ತ್ರಿಗಳ ಎರಡನೆಯ ಮಗ ಕೋಣನೂರು ರಾಮಕೃಷ್ಣ ಶಾಸ್ತ್ರಿಯವರು ವಾಗೀಶ್ವರಿಯವರ ಗಂಡ. ಅವರು ಸರ್ಕಾರದ ಮಾಧ್ಯಮಿಕ ಶಾಲೆಯ ಶಿಕ್ಷಕರಾಗಿದ್ದರು. ಆಗಾಗ ವರ್ಗಾವಣೆಯ ಕೆಲಸ. ಗಂಡನೊಡನೆ ಬೇರೆಬೇರೆ ಊರುಗಳಲ್ಲಿ ವಾಗೀಶ್ವರಿ ಅವರ ವಾಸ. ರಾಮಕೃಷ್ಣ ಶಾಸ್ತ್ರಿಗಳಿಗೆ ಅಧ್ಯಾಪನದ ಜೊತೆಗೆ ಸಂಗೀತ ಪರಿಣತಿಯಿತ್ತು. ಅದು ಅವರ ತಂದೆಯ ಬಳುವಳಿ. ಗಂಡನ ಸಂಗೀತಜ್ಞಾನ ಹೆಂಡತಿಗೆ ವರದಾನವಾಯಿತು. ಎಲ್ಲಾ ಸಂಪ್ರದಾಯಸ್ಥ ಬ್ರಾಹ್ಮಣ ಮಹಿಳೆಯರಂತೆ ಅತ್ತೆ ಕಣಗಾಲು ಶಾರದಮ್ಮ ಹಾಡುಗಳ ಗಣಿ. ವಾಗೀಶ್ವರಿ ಶಾಸ್ತ್ರಿ ಅವರ ಹಾಡುಗಳನ್ನೂ ತಮ್ಮದಾಗಿಸಿಕೊಂಡರು. ಹಾಡು, ಹಾಡುಗಾರಿಕೆ, ಗೃಹಕೃತ್ಯದೊಡನೆ ಸಮರಸವಾಯಿತು.

ವಾಗೀಶ್ವರಿ ದಂಪತಿಗಳಿಗೆ ಎಂಟುಜನ ಮಕ್ಕಳು: ಶೈಲಜ, ಅನ್ನಪೂರ್ಣ, ನಾಗರಾಜ, ವಿಜಯಲಕ್ಷ್ಮಿ, ಶ್ರೀಕಂಠಮೂರ್ತಿ, ಗೀತ, ನರಸಿಂಹ ಪ್ರಸಾದ್ ಮತ್ತು ವೀಣಾ. ದೊಡ್ಡಸಂಸಾರ. ಅದನ್ನು ನಿರ್ವಹಿಸುವುದರಲ್ಲೇ ಸಮಯ ವ್ಯಯವಾಗುತ್ತಿತ್ತು. ಅದನ್ನು ನಿರ್ಲಕ್ಷಿಸುವುದು ಸಾಧ್ಯವಿರಲಿಲ್ಲ.

ಅದೇ ಬದುಕಿನ ಸರ್ವಸ್ವವೆಂಬಂತೆ ಹೊಂದಿಕೊಂಡರು. ಮಕ್ಕಳೆಲ್ಲಾ ವಿದ್ಯಾವಂತರಾಗಲು, ಸುಸಂಸ್ಕೃತರಾಗಲು ಶ್ರಮಿಸಿದರು. ತಮಗಿಲ್ಲದ ಉನ್ನತ ವ್ಯಾಸಂಗದ ಕೊರತೆ ಮಕ್ಕಳಿಗಾಗದಂತೆ ನೋಡಿಕೊಂಡರು. ಗಂಡನ ವರ್ಗಾವಣೆ ಕೆಲಸದೊಡನೆ ಬೇರೆ ಬೇರೆ ಊರುಗಳಿಗೆ ಹೋಗಬೇಕಾದುದರಿಂದ ಹಲವು ಕ್ಷೇತ್ರದ, ಹಲವು ಮಹನೀಯರ ಪರಿಚಯವಾಗಲು ಕಾರಣವಾಯಿತು.

ವಾಗೀಶ್ವರಿ ಅವರಿಗೆ ೧೯೬೦ರ ದಶಕದಲ್ಲಿ ಸಾಹಿತ್ಯ ರಚನೆಯ ಕಡೆಗೆ ಮನಸ್ಸು ಒಲಿಯಿತು. ತಾವು ಕಲಿತ ಸಂಪ್ರದಾಯದ ಹಾಡುಗಳ ಹಿನ್ನೆಲೆಯಲ್ಲಿ ಸಂಪ್ರದಾಯ ಆಚರಣೆ ಕುರಿತು, ಕಿರು ಲೇಖನಗಳನ್ನು ಬರೆದು ಪತ್ರಿಕೆಗಳಿಗೆ ಕಳುಹಿಸಲು ಮೊದಲುಮಾಡಿದರು. ಅವು ಪ್ರಕಟವಾದಾಗ ಖುಷಿಗೊಂಡರು. ಉತ್ಸಾಹ ನೂರ್ಮಡಿಸಿತು. ಆಕಾಶವಾಣಿಯಲ್ಲಿ ಸಂಪ್ರದಾಯಗೀತೆಗಳ ಹಾಡುಗಾರಿಕೆಗೆ ಅವಕಾಶ ಸಿಕ್ಕಿದಾಗ, ತಾವು ಹಾಡುಕಲಿತದ್ದು ಸಾರ್ಥಕವಾಯಿತು ಎನಿಸಿತು. ತಾವು ಕಲಿತಿದ್ದನ್ನು ಆಸಕ್ತರಿಗೆ ಕಲಿಸಲು ಪ್ರಾರಂಭಿಸಿದರು. ಸಂಗೀತ ಕಲಿಕೆಗೆ ಮನಸ್ಸುಮಾಡಿದ್ದು, ಸಂಗೀತಜ್ಞಾನದವರ ಮನೆಗೆ ಸೊಸೆಯಾದದ್ದು ಉಪಯೋಗಕ್ಕೆ ಬಂತು. ಹೆಚ್ಚು ವಿದ್ಯಾವಂತೆಯಲ್ಲದಿದ್ದರೂ ಓದುಬರಹ ತಿಳಿದಿದ್ದುದರಿಂದ ತಾವು ಕಂಠಸ್ಥ ಮಾಡಿಕೊಂಡಿದ್ದ ಮೌಖಿಕ ಪರಂಪರೆಯ ಅಸಂಖ್ಯಾತ ಹಾಡುಗಳನ್ನು ಅಕ್ಷರರೂಪಕ್ಕಿಳಿಸಿ ಬರೆದಿಡಲು ಪ್ರಯತ್ನಿಸಿದರು. ಅದು ಸಾವಿರಾರು ಪುಟಗಳ ಸಾಹಿತ್ಯವಾಯಿತು. ಅದೇ 'ಹೃದಯ ಸಂಪುಟ'– ಸಂಪ್ರದಾಯ ಹಾಡುಗಳ ಹೆಬ್ಬೊತ್ತಗೆ. ಕಲಿತಿದ್ದ ಹಾಡುಗಳನ್ನು ಬರೆದಿಡಲು ಪ್ರಾಧ್ಯಾಪಕ ಜಿ. ಅಶ್ವತ್ಥ ನಾರಾಯಣರು ಪ್ರೇರಣೆನೀಡಿದರೆಂದು ದಾಖಲಾಗಿದೆ.

ವಾಗೀಶ್ವರಿ ಅವರು ಹೃದಯ ಸಂಪುಟ ಬೃಹತ್ ಪುಸ್ತಕ ಪ್ರಕಟಣೆಗೆ ಸಾಕಷ್ಟು ಶ್ರಮಪಟ್ಟರು. ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ

ಸಹಾಯಧನ ಹಾಗೂ ಕೆನರಾ ಬ್ಯಾಂಕ್‌ನಿಂದ ಪಡೆದ ಸಾಲದ ಹಣದಿಂದ, 'ವಾಗ್ದೇವಿ ಕಲಾನಿಕೇತನ' ಎಂಬ ಸ್ವಂತ ಪ್ರಕಾಶನ ಸಂಸ್ಥೆಯಿಂದ ಗ್ರಂಥವನ್ನು ಪ್ರಕಟಿಸಿದರು. ಸುಪ್ರಸಿದ್ಧರಿಂದ ಬಿಡುಗಡೆ ಕಾರ್ಯಕ್ರಮ ನಡೆಯಿತು (೧೫.೪.೧೯೮೫). ಅಂದಿನ ಕಾರ್ಯಕ್ರಮದಲ್ಲಿ ಡಾ. ಗೊರೂರು ರಾಮಸ್ವಾಮಿ ಅಯ್ಯಂಗಾರ್, ಡಾ. ಜೀ.ಶಂ. ಪರಮಶಿವಯ್ಯ, ನಿಟ್ಟೂರು ಶ್ರೀನಿವಾಸರಾವ್, ಪ್ರೊ. ಚಿ.ನ. ಮಂಗಳ ಭಾಗವಹಿಸಿದರು. ಪುಸ್ತಕದ ಬಗೆಗೆ ಅತ್ಯುತ್ತಮ ಪ್ರತಿಕ್ರಿಯೆ ಬಂತು.

ಮೌಲಿಕವಾದ 'ಹೃದಯ ಸಂಪುಟ' ಗೀತಗುಚ್ಛ ಗ್ರಂಥವನ್ನು ಕುರಿತು ಖ್ಯಾತ ಬರಹಗಾರರಾದ ಡಾ. ಗೊರೂರು ರಾಮಸ್ವಾಮಿ ಅಯ್ಯಂಗಾರ್ ಹೀಗೆ 'ಮುನ್ನುಡಿ'ದಿದ್ದಾರೆ :

"ಶ್ರೀಮತಿ ವಾಗೀಶ್ವರಿ ಶಾಸ್ತ್ರಿಯವರು ಈ ಬೃಹತ್ ಕೃತಿಯನ್ನು ನೀಡಿ ಕನ್ನಡ ನುಡಿ ಮತ್ತು ನಾಡಿಗೆ ಅಪೂರ್ವವಾದ ಸೇವೆಯನ್ನು ಸಲ್ಲಿಸಿದ್ದಾರೆ. ಇದು ಅವರ ಜೀವಮಾನದ ಸಾಧನೆಯ ಫಲ.... ಈ ಹಾಡುಗಳನ್ನು ನಾವು ಶಿಷ್ಟ ಜಾನಪದವೆಂದು ಕರೆಯಬಹುದು. ಇಲ್ಲಿ ಜನಜೀವನಕ್ಕೆ ಪ್ರಾಧಾನ್ಯ..... ಮಹಿಳೆಯರು ತಮ್ಮ ಜೀವನಕ್ಕೆ ಉತ್ಸಾಹವನ್ನು ಹೊಂದಲು ಈ ಜನಪದ ಸಾಹಿತ್ಯವನ್ನು ರಚಿಸಿಕೊಂಡಿದ್ದಾರೆ... ಇವುಗಳನ್ನು ಅವರು ಬರೆಯದೆ ಪ್ರಕಟಿಸದೆ ಇದ್ದಿದ್ದರೆ, ಈ ಸಾಹಿತ್ಯದ ಬಹುಭಾಗ ನಷ್ಟವಾಗಿಹೋಗುತ್ತಿದ್ದಿತು".

ಕನ್ನಡ ಜಾನಪದದ ಪ್ರಥಮದರ್ಜೆಯ ವಿದ್ವಾಂಸರಾದ ಡಾ. ಜೀ.ಶಂ. ಪರಮಶಿವಯ್ಯ ಅವರು 'ಹೃದಯ ಸಂಪುಟ' ಗ್ರಂಥದ ಬಗೆಗೆ ಹೀಗೆ ಪ್ರತಿಕ್ರಿಯೆ ನೀಡಿದ್ದಾರೆ :

"ಸಂಪ್ರದಾಯದ ಪದಗಳು ನಮ್ಮ ಜನಪದ ಸಾಹಿತ್ಯದ ಒಂದು ಅಂಗವಾಗಿ ಪರಿಗಣಿತವಾಗಿವೆ.... ಈ ಹಾಡುಗಳೆಲ್ಲ ಒಂದು ಕಾಲಕ್ಕೆ

ಅವಿದ್ಯಾವಂತರೇ ಆಗಿದ್ದ ಬ್ರಾಹ್ಮಣ ಸ್ತ್ರೀಯರಲ್ಲಿ ಮೌಖಿಕ ಮೂಲವನ್ನು ಅನುಸರಿಸಿ ತಲೆಮಾರಿನಿಂದ ತಲೆಮಾರಿಗೆ ಸಾಗಿಬಂದಿವೆ. ಇವುಗಳ ಕರ್ತೃತ್ವ ಅಜ್ಞಾತವಾಗಿಯೇ ಉಳಿದಿದೆ. ಈ ಹಾಡುಗಳನ್ನು ಚಾರಿತ್ರಿಕ ಭೌಗೋಳಿಕ ರೂಪಗಳಲ್ಲಿ ಗುರುತಿಸಬಹುದಾಗಿದೆ ಎಂದಾಗ ಇವು ಜನಪದ ಸಾಹಿತ್ಯಕ್ಕೆ ಸಹಜವಾದ ಪ್ರಸರಣಗುಣವನ್ನು ಸಾಧಿಸಿಕೊಂಡಿವೆ... 'ಸಂಪ್ರದಾಯದ ಪದಗಳು' ಮನೆಯ ಹಿತ್ತಲಲ್ಲಿ ಬೆಳೆದ ಕೈದೋಟದ ಮಲ್ಲಿಗೆ ಜಾಜಿಗಳಂತೆ, ಗ್ರಾಮೀಣ ಪ್ರದೇಶದ ಜನಪದ ಸಾಹಿತ್ಯ ಬಯಲು ವಿಸ್ತಾರದಲ್ಲಿ ಹರಡಿಕೊಂಡ ತೆಂಗಿನ ಬನದಂತೆ.... ವಿದ್ಯಾವಂತ ಸಮಾಜದಲ್ಲಿ ಸಾವಿರಾರು ವರ್ಷಗಳಿಂದ ಇಂಥ ಒಂದು ಸಾಹಿತ್ಯ ಪರಂಪರೆ ಹೆಣ್ಣು ಮಕ್ಕಳಲ್ಲಿ ಉಳಿದುಬಂದಿರುವುದು ಸೋಜಿಗದ ವಿಷಯವಾಗಿದೆ...... ಶ್ರೀಮತಿ ವಾಗೀಶ್ವರಿ ಅವರು ಸಂಪ್ರದಾಯದ ಪದಗಳ ಒಂದು ಪುಟ್ಟ ವಿಶ್ವಕೋಶವನ್ನೇ ಸಿದ್ಧಗೊಳಿಸಿ ನಮಗೆ ನೀಡಿದ್ದಾರೆ. ಅವರದು ಮುಗಿಯದ ಭಂಡಾರ."

ಸಂಪ್ರದಾಯದ ಹಾಡುಗಳ ಬಗೆಗೆ ವಾಗೀಶ್ವರಿ ಶಾಸ್ತ್ರಿಯವರು ಹೀಗೆ ಅಭಿಪ್ರಾಯಿಸಿದ್ದಾರೆ :

"ಸಂಪ್ರದಾಯದ ಹಾಡುಗಳು ನನಗೆ ಹುಟ್ಟಿನಿಂದಲೇ ಅಂಟಿಕೊಂಡು ಬಂದವು... ನಮ್ಮ ಪ್ರಾಚೀನ ಪರಂಪರೆಯನ್ನು ಹೇಗೆ ಉಳಿಸಿಕೊಳ್ಳಬೇಕೆಂಬುದೇ ಚಿಂತೆ.... ನಮ್ಮ ಮುತ್ತಜ್ಜಿ, ಅಜ್ಜಿಯವರಿಂದ ಹರಿದುಬಂದ ಈ ಸಂಪತ್ತನ್ನು ಈಗಿನ ಕಾಲಕ್ಕೆ ಅನುಕೂಲಿಸುವಂತೆ ಬರವಣಿಗೆಯ ಮೂಲಕವಾದರೂ ಬಿಟ್ಟುಹೋಗುವ ಚಪಲ...... ಸಂಪ್ರದಾಯದ ಹಾಡುಗಳು ನಮ್ಮ ಗೃಹಿಣಿಯರ ದೈನಂದಿನ ಆಚಾರ ವಿಚಾರಗಳಲ್ಲಿ ಹೇಗೆ ಹಾಸುಹೊಕ್ಕಾಗಿ ಬೆರೆತುಕೊಂಡಿದ್ದವು ಎಂಬುದನ್ನು ತಿಳಿಸುವುದೇ ಈ ಗ್ರಂಥದ ಉದ್ದೇಶ..... ಈ ಹಾಡುಗಳನ್ನೆಲ್ಲಾ

ಬಾಯಿಪಾಠವಾಗಿ ಕಲಿತು ಉಳಿಸಿದುದರಿಂದ ಈ ಸಾಹಿತ್ಯವೆಲ್ಲಾ ವಾಕ್ ಸಂಪ್ರದಾಯವಾಗಿ ರೂಪುಗೊಂಡಿತು.

ನಮ್ಮ ಹಿಂದಿನವರ ಸಂಪ್ರದಾಯಗಳನ್ನೆಲ್ಲಾ ಜನಸಾಮಾನ್ಯರು ನಡೆಸಿಕೊಂಡು ಬಂದದ್ದರಿಂದ ಆಯಾಯ ಸಂಪ್ರದಾಯಗಳು ಆಯಾಯ ಗುಂಪಿನಲ್ಲಿ ಬಳಕೆಯಲ್ಲಿದ್ದುದು ಗೋಚರವಾಗುತ್ತದೆ. ಹೀಗೆಯೇ ಈ ಜನಸಮೂಹವು ಹಾಡಿಕೊಂಡು ಬಂದ ಹಾಡುಗಳು ಜನಪದ ಹಾಡುಗಳೆಂದು ತಿಳಿಯಬಹುದಾಗಿದೆ..... ಅವರವರ ಕುಲದೈವ ಮತ್ತು ಇಷ್ಟದೇವರನ್ನು ಭಕ್ತಿಯಿಂದ ಭಜಿಸುವುದಕ್ಕೆ ಈ ಸಂಪ್ರದಾಯ ಹಾಡುಗಳು ಸಹಾಯಕವಾಗಿವೆ ಎನ್ನಲಡ್ಡಿಯಿಲ್ಲ..... ಹಿಂದೆ ಕಂಠಸ್ಥವಾಗಿ ಕಲಿಯುತ್ತಿದ್ದ ಇಂತಹ ಹಾಡುಗಳನ್ನು ಅಕ್ಷರ ಕಲಿತ ಮೇಲೆ ಪ್ರತಿಯೊಬ್ಬ ಗೃಹಿಣಿಯೂ ತನ್ನದೇ ಆದ ಒಂದೊಂದು ಹಾಡಿನ ಪುಸ್ತಕವನ್ನು ಹೊಂದಿದ್ದು, ಅದನ್ನು ತನ್ನ ಒಡವೆಗಿಂತ ಹೆಚ್ಚಾಗಿ ಕಾಪಾಡಿಕೊಳ್ಳುತ್ತಿದ್ದಳು.... ಈ ಎಲ್ಲಾ ಭಾಗದ ಹಾಡುಗಳಿಗೂ ಮೂಲಧಾಟಿಯಲ್ಲಿ ರಾಗತಾಳಗಳನ್ನು ಗುರುತಿಸಲಾಗಿದೆ. ಪದ್ಯಗಳ ಮಧ್ಯೆ ಗೀಟುಗಳನ್ನು ಹಾಡುವಾಗಿನ ತಾಳಗಳ ಲೆಕ್ಕಾಚಾರದಂತೆ ಹಾಕಲಾಗಿದೆ. ಹಾಡುವವರು ಅರ್ಥಕ್ಕೆ ಸರಿಹೊಂದಿಸಿಕೊಂಡು ಮೂಲಧಾಟಿ ಬಿಡದಂತೆ ಹಾಡಿಕೊಳ್ಳಬೇಕೆಂದು ವಿನಂತಿ".

೨೦೦೮ರಲ್ಲಿ ಹೃದಯ ಸಂಪುಟದ ಎರಡನೆಯ ಮುದ್ರಣ ಪ್ರಕಟವಾಯಿತು. ಅದರ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ನಿಘಂಟು ತಜ್ಞ ಪ್ರೊ. ಜಿ. ವೆಂಕಟಸುಬ್ಬಯ್ಯ, ಉದ್ಯಮಿ ಸಿ.ವಿ.ಎಲ್. ಶಾಸ್ತ್ರಿ, ಸಂಶೋಧಕ ಡಾ. ಟಿ.ವಿ. ವೆಂಕಟಾಚಲ ಶಾಸ್ತ್ರಿ, ಜನಪದ ತಜ್ಞ ಪ್ರೊ. ಡಿ. ಲಿಂಗಯ್ಯ, ಲೇಖಕಿ ಡಾ. ಕೆ.ಆರ್. ಸಂಧ್ಯಾ ರೆಡ್ಡಿ ಭಾಗವಹಿಸಿ ಗ್ರಂಥದ ಹಿರಿಮೆಯನ್ನು ಪರಿಚಯಿಸಿದರು. ದ್ವಿತೀಯ ಆವೃತ್ತಿಯಲ್ಲಿ ಕಥನ ಗೀತೆಗಳು ಹಾಗೂ

ಮಕ್ಕಳ ಸಾಹಿತ್ಯದಲ್ಲಿ ಅಲ್ಪಸ್ವಲ್ಪ ಬದಲಾವಣೆಯಾಗಿದೆ. ಮೂರು ಕಥನಗೀತೆಗಳನ್ನು ಹೊಸದಾಗಿ ಸೇರಿಸಿದೆ. ಅವುಗಳಲ್ಲಿ 'ಚೋರಕಥೆ' ಗಮನಾರ್ಯ್ಹವಾಗಿದೆ. ಅದರ ಸುದೀರ್ಘವಾದ ವಿಮರ್ಶೆಯೂ ಇದೆ. ಅದರಲ್ಲಿ ಹಾಡುಗಾರ್ತಿ ವಾಗೀಶ್ವರಿ ಶಾಸ್ತ್ರಿ ಅವರ 'ವಿಮರ್ಶಕಿ' ಮುಖವನ್ನು ಗುರುತಿಸಬಹುದು.

ಸಂಗ್ರಾಹಕಿ, ಸಂಪಾದಕಿ, ಪ್ರಕಾಶಕಿ ಶ್ರೀಮತಿ ವಾಗೀಶ್ವರಿ ಶಾಸ್ತ್ರಿ ಅವರ 'ಹೃದಯ ಸಂಪುಟ' ಸಂಪ್ರದಾಯದ ಹಾಡುಗಳ ವಿಶಿಷ್ಠ ಗ್ರಂಥ. ಒಂಧು ಸಾವಿರಧ ಒಂದು ನೂರು ಪುಟಗಳಿಗೂ ಮೀರಿರುವ ಈ ದೊಡ್ಡ ಗ್ರಂಥದಲ್ಲಿ ವೈವಿಧ್ಯಮಯವಾದ ಸಂಪ್ರದಾಯದ ಹಾಡುಗಳಿವೆ. ೧೯೮೫ರಲ್ಲಿ ಪ್ರಥಮ ಬಾರಿಗೆ ಪ್ರಕಟವಾಗಿದ್ದ ಈ ವಿಶಿಷ್ಟ ಗ್ರಂಥ ೨೦೦೮ರಲ್ಲಿ ದ್ವಿತೀಯ ಮುದ್ರಣ ಕಂಡಿದೆ. ಎರಡನೆಯ ಮುದ್ರಣದಲ್ಲಿ ವಿಸ್ತಾರಗೊಂಡಿದೆ; ಹಲವು ಪೂರಕ ವಿಷಯಗಳನ್ನು ಒಳಗೊಂಡಿದೆ. 1/8 ಡೆಮಿ ಆಕಾರದ ಬೃಹತ್ ಗ್ರಂಥ ಸೃಜನಶೀಲ ಮಹಾಕಾವ್ಯದಂತೆ ಅಚ್ಚುಕಟ್ಟಾಗಿ, ಆಕರ್ಷಕವಾಗಿ, ಹೆಮ್ಮೆ ಪಡುವಂತೆ ಅಚ್ಚಾಗಿದೆ. ಬೆಲೆಯೂ ದುಬಾರಿಯಾಗಿಲ್ಲ. ಒಟ್ಟು ಗ್ರಂಥದಲ್ಲಿ ಶ್ರೀಮತಿ ವಾಗೀಶ್ವರಿ ಶಾಸ್ತ್ರಿಗಳ ಸದಭಿರುಚಿ, ಸಂಸ್ಕೃತಿಪ್ರೀತಿ, ಜನಪದ ಕಾಳಜಿ ಎದ್ದುಕಾಣುತ್ತದೆ. ಗಾತ್ರದಲ್ಲಿ, ಗುಣದಲ್ಲಿ ಗಣನೀಯವಾದ ಈ ಗ್ರಂಥ ಜನಪದ ಅಧ್ಯಯನಕಾರರಿಗೆ, ಹಾಡುಗಾರರಿಗೆ, ಸಂಸ್ಕೃತಿಸಂವಾದಕರಿಗೆ ಅಮೂಲ್ಯವಾದ ಕೊಡುಗೆಯಾಗಿದೆ.

ವಾಗೀಶ್ವರಿ ಶಾಸ್ತ್ರಿಗಳ ಗಜಗಾತ್ರ ಗ್ರಂಥದಲ್ಲಿ, ಆರು ಪ್ರಮುಖ ವಿಭಾಗಗಳಿವೆ; ಮುನ್ನೂರ ಐವತ್ತಕ್ಕೂ ಮೇಲ್ಪಟ್ಟು ಚಿಕ್ಕ, ದೊಡ್ಡ ಹಾಡುಗಳಿವೆ. ಹಾಡುಗಳನ್ನು ವಿಷಯವಾರು ವಿಂಗಡಿಸಿ, ಪ್ರಮುಖವಾದ ಶೀರ್ಷಿಕೆ ನೀಡಿದೆ.

ಉದಾಹರಣೆಗೆ : ಅಕ್ಕರಾಸ್ತೆಯ ಶಾಸ್ತ್ರದ ಹಾಡುಗಳು, ದೇವತಾ ಕಾರ್ಯಗಳಿಗೆ ಸಂಬಂಧಿಸಿದ ಹಬ್ಬದ ಹಾಡುಗಳು, ವ್ರತಕಥೆ ಹಾಡುಗಳು, ನಿತ್ಯಪಾರಾಯಣದ ಸ್ತೋತ್ರದ ಹಾಡುಗಳು, ಕಥನ ಗೀತೆಗಳು ಮತ್ತು ಮಕ್ಕಳ ಸಾಹಿತ್ಯ.

ಇವುಗಳಲ್ಲಿ ವಿವಿಧ ಬಗೆಯ ಹಾಡುಗಳ ಉಪವಿಭಾಗಗಳೂ ಉಂಟು. ಉದಾಹರಣೆಗೆ : ಹೆಣ್ಣು ಮಗಳನ್ನು ಹಸೆಗೆ ಕರೆಯುವ ಹಾಡುಗಳು, ಗಂಡು ಮಕ್ಕಳನ್ನು ಹಸೆಗೆ ಕರೆಯುವ ಹಾಡುಗಳು, ತೊಟ್ಟಿಲು ಶಾಸ್ತ್ರದ ಹಾಡುಗಳು, ಚೌಲೋಪನಯನದ ಹಾಡುಗಳು, ಮದುವೆಯ ಹಾಡುಗಳು, ಉರುಟಣೆ ಹಾಡುಗಳು, ಬೀಗರ ಹಾಡುಗಳು, ಬಾಗಿಲು ತಡೆದ ಹಾಡುಗಳು, ಆರತಿ ಹಾಡುಗಳು, ಆಶೀರ್ವಾದದ ಹಾಡುಗಳು, ಲಾಲಿ ಹಾಡುಗಳು, ದೇವಿಯನ್ನು ಕುರಿತ ಹಾಡುಗಳು, ಹೂ ಬೇಡಿದ ಹಾಡುಗಳು, ತುಳಸೀ ಹಾಡುಗಳು ಮೊದಲಾದವು. ಎಲ್ಲವೂ ನಮ್ಮ ಪರಂಪರೆಯಿಂದ ಬಾಯಿಂದ ಬಾಯಿಗೆ ಹರಿದುಬಂದ ಸಾಹಿತ್ಯ ಸಂಪತ್ತು. ಎಷ್ಟೊಂದು ಹಾಡುಗಳು! ಎಷ್ಟೊಂದು ಆಚರಣೆಗಳು! ಹಾಡುಗಳಿಲ್ಲದ ಆಚರಣೆಗಳೇ ಇಲ್ಲವೇನೋ ಅನ್ನಿಸುತ್ತದೆ. ಎಲ್ಲವೂ ಸ್ತ್ರೀಯರ ಸ್ವತ್ತು.

ವಾಗೀಶ್ವರಿ ಅವರು ಸಂಗೀತ ಪರಿಸರದಲ್ಲಿ ಬೆಳೆದುದರಿಂದ, ಸಂಗೀತ ಪ್ರಿಯರಾದುದರಿಂದ, ತಾವು ಕಲಿತ ಹಾಡುಗಳಿಗೆ ಹಾಡುಗಾರಿಕೆಯ ಚೌಕಟ್ಟನ್ನು ಸೂಚಿಸಿದ್ದಾರೆ; ರಾಗ ತಾಳಗಳನ್ನು ಹೆಸರಿಸಿದ್ದಾರೆ. ಶಿಷ್ಟ ಸಂಗೀತದಂತೆ ಜನಪದ ಸಂಗೀತಕ್ಕೂ ಸ್ಪಷ್ಟವಾದ ಮಟ್ಟಿನ ಪರಿಧಿಯಿರಬೇಕೆಂಬುದರತ್ತ ಇದು ಗಮನಸೆಳೆಯುತ್ತದೆ. ರಾಗ ತಾಳಗಳ ನಿಖರವಾದ ಸೂಚನೆಗೆ ಸಂಗೀತ ಪರಿಶ್ರಮವಿದ್ದ ಅವರ ಗಂಡ ಸಹಕರಿಸಿದ್ದಾರೆ.

ಹಾಡನ್ನು ಕಲಿತವರ ಬಗೆಗೆ, ಪಡೆದವರ ಬಗೆಗೆ ವಿವರನೀಡಿದ್ದಾರೆ. ಹಾಡಿನ ಸಮಯ ಸಂದರ್ಭ ಸ್ವಾರಸ್ಯ ಸಾರಾಂಶ ವೈಶಿಷ್ಟ್ಯಗಳನ್ನು ತಿಳಿಸಿದ್ದಾರೆ. ಅಧ್ಯಯನಕಾರರಿಗೆ ವಿಫುಲವಾದ ಪೂರಕಟಿಪ್ಪಣಿ ಸಾಹಿತ್ಯವನ್ನು ಒದಗಿಸಿದ್ದಾರೆ. ಶ್ರೀಮತಿಯರ ಟಿಪ್ಪಣಿಗಳಲ್ಲಿ ಕಂಡುಬರುವ ಒಳನೋಟ, ವೈಚಾರಿಕತೆ ಮನನೀಯವಾಗಿದೆ. ಸಾಮಾನ್ಯ ಅಕ್ಷರಜ್ಞಾನದ ಅವರ ಲೋಕಾನುಭವ ಬೆರಗುಗೊಳಿಸುತ್ತದೆ.

ವಾಗೀಶ್ವರಿ ಅವರು ಕಂಠಸ್ಥವಾಗಿ ಉಳಿಸಿ ಬರೆದು ಪ್ರಕಟಿಸಿರುವ ಹಾಡುಗಳ ಹುಟ್ಟಿನ ಕಾಲವನ್ನು ಗ್ರಹಿಸಲಾಗುವುದಿಲ್ಲ. ಪ್ರಾಚೀನ ಕಾಲದಿಂದ ಉಳಿದುಬಂದಿವೆ ಎಂದಷ್ಟೇ ಹೇಳಬಹುದು. ಕೆಲವು ಹಾಡಿನ ಧಾಟಿ(ರಾಗ) ಅತಿ ಪ್ರಾಚೀನ. ಹಲವು ಅನಂತರದವು. ಈ ಹಾಡುಗಳ ಸದುದ್ದೇಶ ಬಹುಮುಖಿಯಾದದ್ದು; ಸಮಾಜಮುಖಿಯಾದದ್ದು. ವಾಗೀಶ್ವರಿ ಅವರೇ ಹೇಳಿರುವಂತೆ, "ಇಂತಹ ಹಾಡು ಹಸೆಗಳು ಪ್ರಾಚೀನ ಕಾಲದ ಅತಿ ಸಾಮಾನ್ಯ ಮಹಿಳೆಯ ಜೀವನದಲ್ಲಿ ಹಾಸುಹೊಕ್ಕಾಗಿರುವ ಭಾಗವಾಗಿದ್ದವು. ಆಗಿನ ಕಾಲದಲ್ಲಿ ಮಹಿಳೆಗೆ ಈ ಹಾಡುಗಳು ಆಸ್ತೆ ಅಕ್ಕರೆ, ಜ್ಞಾನ, ಭಕ್ತಿ, ವೈರಾಗ್ಯಗಳಿಗೆ ಸಹಾಯುವಾಗಿದ್ದುವಲ್ಲದೆ, ಪುರಾಣೇತಿಹಾಸಗಳ ಪರಿಚಯುಕ್ಕೂ ಸಹಾಯಕವಾಗಿದ್ದವು.... ಸಂಪ್ರದಾಯದ ಹಾಡುಗಳ ವ್ಯಾಪ್ತಿ ಆಯಾ ಭಾಗಕ್ಕೆ ತಕ್ಕಂತೆ ಮೂರು ನುಡಿಗಳಿಂದ ಹಿಡಿದು ಮೂವತ್ತು, ಮುನ್ನೂರು, ಮೂರು ಸಾವಿರ ನುಡಿಗಳವರೆಗೂ ವಿಸ್ತಾರವಾಗಿವೆ".

ಪ್ರಸ್ತುತ ಸಂಪ್ರದಾಯದ ಹಾಡುಗಳು ಸಂಗೀತದ ಚೌಕಟ್ಟಿಗೆ ಒಳಪಟ್ಟಿವೆ. ಅವುಗಳಲ್ಲಿ ಮೌಖಿಕ ಪರಂಪರೆಯ ಜನಪದ ಧಾಟಿಯೂ ಶಾಸ್ತ್ರೀಯ ಸಂಗೀತದ

ಶಿಷ್ಟಧಾಟಿಯೂ ಮೇಳವಿಸಿವೆ. ಬ್ರಾಹ್ಮಣಸಮಾಜದ ಮಹಿಳೆಯರು ತಮ್ಮ ಹಾಡುಗಾರಿಕೆಯ ಸೌಲಭ್ಯಕ್ಕೆ ಸಹಜವಾಗುವಂತೆ ದುಡಿಸಿಕೊಂಡಿದ್ದಾರೆ. ಈ ಗ್ರಂಥದ ಅಧಿಕ ಹಾಡುಗಳು ಹಾಸನಜಿಲ್ಲೆಗೆ ಸಂಬಂಧಿಸಿರುವುದು ಗಮನಾರ್ಹವಾಗಿದೆ.

'ಹೃದಯ ಸಂಪುಟ' ಸಂಪ್ರದಾಯ ಹಾಡುಗಳು ಗ್ರಂಥದ ಆರುಭಾಗಗಳಿಗೂ ಉಪಯುಕ್ತವಾದ, ಅಧ್ಯಯನಶೀಲವಾದ ಪ್ರಸ್ತಾವನೆಯಿದೆ. ಇದರಲ್ಲಿ ಆಯಾ ಸಂಪ್ರದಾಯದ ಹಾಡುಗಳ ಸಂದರ್ಭ, ಉದ್ದೇಶ, ಉಪಯೋಗ, ಅವುಗಳನ್ನು ಕಲಿಯುವ ಕ್ರಮ, ಶ್ರಮ, ಅರ್ಥ ಅಂತರಂಗ ಮೊದಲಾದವುಗಳನ್ನು ಕುರಿತು ಹೇಳಿದೆ. ವಾಗೀಶ್ವರಿ ಅವರು ತಾವು ಹೇಗೆ ಹಾಡುಗಳನ್ನು ಕಲಿತರೆಂಬುದನ್ನೂ ಯಾರಿಂದ ಯಾವಾಗ ಕಲಿತರೆಂಬುದನ್ನೂ ಕಲಿಯಲು ಎಷ್ಟು ಸಮಯ ಬೇಕಾಯಿತೆಂಬುದನ್ನೂ ವಿವರಿಸಿದ್ದಾರೆ. ಇಂಥ ಹಾಡುಗಳನ್ನು ಕಂಠಪಾಠಮಾಡಿ, ಜ್ಞಾಪಕಶಕ್ತಿಯಿಂದ ಉಳಿಸಿಕೊಂಡು ಬರಲು ಸ್ತ್ರೀಯರು ಪಟ್ಟಿರುವ ಶ್ರಮ ತಾಳ್ಮೆ ಆಸಕ್ತಿ ವೇದ್ಯವಾಗುತ್ತದೆ.

ಅಕ್ಕರಾಸ್ತೆಯ ಶಾಸ್ತ್ರದ ಹಾಡುಗಳನ್ನು ಕುರಿತು ವಾಗೀಶ್ವರಿ ಶಾಸ್ತ್ರಿ ಹೀಗೆ ಹೇಳಿದ್ದಾರೆ :

"ಶಾಸ್ತ್ರದ ಹಾಡುಗಳು ಹಿಂದೆ ಗೃಹಿಣಿಯರ ಜೀವನದಲ್ಲಿ ಮನೋರಂಜನೆಯ ಸಾಧನವಾಗಿಯೂ ಜನಗಳಲ್ಲಿ ಒಡನಾಡುವ ಸದುದ್ದೇಶದಿಂದಲೂ ರಚಿತವಾದ ಅಗಾಧ ಸೃಷ್ಟಿಯಾಗಿವೆ. ಇವು ಶಾಸ್ತ್ರದ ಹಾಡುಗಳಾದರೂ ಈ ಶಾಸ್ತ್ರಗಳೆಲ್ಲಾ ಮನಬಂದಂತೆ ರಚಿಸಿದ್ದುವುವಲ್ಲ. ಇವುಗಳಿಗೆಲ್ಲಾ ವೈಜ್ಞಾನಿಕ ಕಾರಣಗಳಿದ್ದು ಕುತೂಹಲ ಕೆರಳಿಸುವಂತಹುಗಳಾಗಿವೆ".

ಶಾಸ್ತ್ರದ ಹಾಡುಗಳಲ್ಲಿ ಚಿಕ್ಕಮಕ್ಕಳನ್ನು ಹಸೆಗೆ ಕರೆಯುವ ಹಾಡುಗಳು ರೋಚಕವಾಗಿವೆ. ಸುರಟಿರಾಗ ಆದಿತಾಳದ ಒಂದು ಹಾಡು ಹೀಗಿದೆ:

ಯಾಕೆ ಕಿರ್ಕಿರಿ ಮಾಡ್ತಿ ರಂಗ
ಎಷ್ಟು ಛಲ ಹೋರುತೀ ॥ಪಲ್ಲವಿ॥

ಮಕ್ಕಳು ಮಾಣಿಕ್ಯವಲ್ಲವೆ ರಂಗಯ್ಯ
ಬಟ್ಟಲ ಬಾರಿಸಲೇನೋ ॥ ಶ್ರೀ ॥
ಕೃಷ್ಣಾ ಬಾ ಹಸೆಗೇ ॥ ಕರದಾರು ॥ಅ.ಪ॥

ಹಸುರಂಗಿ ತೊಡಿಸಲೇನೋ ।
ಮೊಸರನ್ನ ಉಣಿಸಲೇನೋ ॥
ಹಸನಾದ ಕೊಳಲು ಕೈಯಲಿ ಪಿಡಿದು ।
ಕೂಸನ್ನು ಕುಣಿಸಲೇನೋ ॥ಶ್ರೀ॥
ಕೃಷ್ಣಾ ಬಾ ಹಸೆಗೇ ॥ ಕರಾದಾರು ॥೧॥

ಶಾಲು ಹೊದ್ದಿಸಲೇನೋ ರಂಗಾ ।
ರಂಗ್ ರುಮಾಲ್ ಸುತ್ತಲೇನೋ ।
ಅಂಗನೆರೆಲ್ಲಾ ಮಂಗಳ ಪಾಡಲು ।
ಭಂಗವ ಪಡಿಸುವೆಯೇನೋ ॥ಶ್ರೀ॥
ರಂಗಾ ಬಾ ಹಸೇಗೇ ॥ ಕರಾದಾರು ॥೨॥

(ಮುಟ ೭೪)

ದೇವತಾ ಕಾರ್ಯಗಳಿಗೆ ಸಂಬಂಧಿಸಿದ ಹಬ್ಬದ ಹಾಡುಗಳನ್ನು ವಾಗೀಶ್ವರಿ ಶಾಸ್ತ್ರಿ ಹೀಗೆ ಗ್ರಹಿಸಿದ್ದಾರೆ :

"ಶಾಸ್ತ್ರದ ಹಾಡುಗಳ ಜಾಡಿನಲ್ಲಿಯೇ ಇರುವ ಈ ಹಾಡುಗಳು ಶಿವ ನಾರಾಯಣ ರಾಮ ಕೃಷ್ಣ ಪಾರ್ವತಿ ಲಕ್ಷ್ಮೀ ಶಾರದೆ ಮುಂತಾದ ದೇವರ ಮಹಿಮೆಗಳನ್ನು ಕುರಿತ ಹಾಡುಗಳಾಗಿವೆ. ಇವುಗಳ ಉಪಯೋಗ ಹಬ್ಬ ಹರಿದಿನಗಳ ಪೂಜೆ ಪುರಸ್ಕಾರಗಳಲ್ಲಿ ಬಹುಮುಖ್ಯವಾಗಿತ್ತು."

ಹಬ್ಬದ ಹಾಡುಗಳಲ್ಲಿ ದ್ವಂದ್ವಾರ್ಥದ ಹಾಡುಗಳೂ ಉಂಟು. ಅಂಥವುಗಳಲ್ಲಿ 'ಅವರೇ ಕಾಯ್ ಬೇಕು' ಎಂಬ ಹಾಡೂ ಒಂದು. ಅದು ನಾದನಾಮ ಕ್ರಿಯ ರಾಗ ಆದಿತಾಳದಲ್ಲಿದೆ:

ಅವರೇ ಕಾಯ್ ಬೇಕು । ಕಾಲದೋ ।
ಳವರೇ ಕಾಯ್ ಬೇಕು ॥ಪಲ್ಲವಿ॥
ಅವರೇ ಸಂಪದ ಅವರೇ ಬಹುರುಚಿ ॥
ಅವರಿಂದಲೇ । ಮೋಕ್ಷಸಾಧನವು ॥ಅ.ಪ॥

ಅವರೆಲ್ಲಾ ಬಿತ್ತೀ ಬೆಳೆದು । ವಿವರವಾಗಿ ಅಳೆದೂ ।
ತವಕದಿ ಮೂಟೆ ಕಟ್ಟಿಟ್ಟರೆ ಜನ ।
ನವರೆಳೆಯುವ ಕಾಲಕ್ಕೆ ಬಂದೊದಗುವ ॥ ಅವರೇ ॥ಚರಣ॥

ಭಕ್ತರಾಗಿ ಇರುವೋ ಜನರಿಗೆ ।
ಮುಕ್ತಿಯನ್ನೆ ಕೊಡುವೋ ॥

ಭಕ್ತರಿಗೆಲ್ಲಾ ಬಾಯಿ ಸವಿಯಾಗುವ ।
ಶಕ್ತಿ ಪುಟ್ಟಿಸುವ ಸರ್ವೋತ್ತಮನೆಂಬ ॥ಚರಣ॥ (ಪುಟ ೨೮೩)

ವಾಗೀಶ್ವರಿ ಶಾಸ್ತ್ರಿ ಅವರು ನೀಡಿರುವ ವ್ರತಕಥೆಯ ಹಾಡುಗಳ ಒಳನೋಟ ಹೀಗಿದೆ :

"ಈ ವ್ರತ ಕಥೆಗಳು ಹೆಸರಿಗೆ ತಕ್ಕಂತೆ ನೋಹಿ ವ್ರತ ಪೂಜೆಗಳನ್ನು ಯಾರು ಮಾಡಿದರು? ಮಾಡಿದರೆ ಫಲವೇನು? ಪಾಪ ಯಾವುದು? ಪಾಪಕ್ಕೆ ಪ್ರಾಯಶ್ಚಿತ್ತವೇನು? ಈ ರೀತಿ ಹಲವಾರು ಬಗೆಯಲ್ಲಿ ಸಾಮಾಜಿಕ ನೀತಿ ನಿಯಮ, ಧರ್ಮ ಕರ್ಮಗಳ ವಿಷಯಗಳನ್ನು ತಿಳಿಸುವ ಹಾಡುಗಳಾಗಿವೆ. ಸಾಮಾನ್ಯವಾಗಿ ಈ ವ್ರತಕ್ರಮದಲ್ಲೆಲ್ಲಾ ದಾನಧರ್ಮಗಳ ವಿಷಯವನ್ನೇ ಬಹುವಾಗಿ ಪ್ರಸ್ತಾಪಿಸಿದ್ದಾರೆ. ಸಂಸಾರದ ವ್ಯವಹಾರಗಳು ಬಾಯಲ್ಲಿ ಹೇಳುವಷ್ಟು ಸುಲಭವಲ್ಲ. ಗೃಹಧರ್ಮವನ್ನು ಪಾಲಿಸಲು ದೇಹಶಕ್ತಿ ಜೊತೆಗೆ ಮನೋದಾರ್ಢ್ಯವೂ (ಆತ್ಮಶಕ್ತಿಯೂ) ಇರಬೇಕಾದ್ದು ಅತ್ಯವಶ್ಯಕ."

ಈ ವಿಭಾಗದಲ್ಲಿ ಸ್ವರ್ಣಗೌರಿ ಕಥೆ, ಭೀಮೇಶ್ವರನ ಕಥೆ, ಮಂಗಳಗೌರಿ ಢವಳಾ, ಮೌನಗೌರಿ ವ್ರತಕಥೆ, ಅನಂತನ ವ್ರತಕಥೆ ಮೊದಲಾದ ತುಸು ದೀರ್ಘ ಹಾಡುಗಳಿವೆ. ಈ ಕಥೆಗಳಲ್ಲಿ ಗಂಡನ ದೀರ್ಘಾಯಸ್ಸಿಗಾಗಿ ಮಾಡುವ ನೋಂಪಿ, ಗಂಡನ ಜೀವದಾನಕ್ಕಾಗಿ ಮಾಡುವ ಪೂಜೆ, ಸ್ತ್ರೀಯ ಬಗೆಗಿನ ಕ್ರೌರ್ಯ, ಅವಳ ಅಸಹಾಯಕತೆ ಸಂಪ್ರದಾಯದ ಸಂಕೀರ್ಣತೆಗೆ ಸಾಕ್ಷಿಯಾಗಿವೆ. ಹಣದ ಆಸೆಗಾಗಿ ಬಡಬ್ರಾಹ್ಮಣ ಮಗಳನ್ನು ಮಾರಿ, ಶವದೊಡನೆ ಮದುವೆ ಮಾಡಿ, ಕಾಡಿನಲ್ಲಿ ಬಿಡುವ ಹೃದಯವಿದ್ರಾವಕ ಕಥಾನಕಗಳೂ ಉಂಟು. ಸುಪ್ರಸಿದ್ಧವಾದ 'ಕಾಳಿಂಗರಾಯ' ಕಥನಗೀತೆಯ ಹಿನ್ನೆಲೆಯುಳ್ಳ ಭೀಮೇಶ್ವರ ವ್ರತಕಥೆಯ ಸಾಂಗತ್ಯದ ಒಂದೆರಡು ನುಡಿಗಳು ಹೀಗಿವೆ:

ಸತ್ತಶವಕೆ ಹೆಣ್ಣು ಕೊಡುವೋರ್‍ಯಾರಿಲ್ಲವೆಂದು
ಸ್ತೋತ್ರದಿಂ ಕೊಟ್ಟನು ಕನ್ನಿಕೆಯಾ.

ಆಗ ಬಾಲಕಿಯನ್ನು ಧಾರೆಯ ಎರೆದರು
ಬೇಗ ರಥದ ಮೇಲೆ ಕುಳ್ಳಿರಿಸಿ
ಗಂಗೆಯ ತಡಿಗಾಗಿ ಬರುತಿರೆ ಬಿರುಗಾಳಿ
ಬಂದಿತು ಸಿಡಿಲು ಮಿಂಚಿನ ರಭಸಾ.

ಕಾರೆಂಬೊ ಕತ್ತಲು ಘೋರೆಂಬೊ ಮಳೆಹುಯ್ಲು
ಅರಣ್ಯದೊಳಗವರನಿರಿಸಿದರೂ
ನಾರಿ ನಿನ್ನರಸನ್ನ ಕಾಯ್ದುಕೊಂಡಿರು ಎಂದು
ಘೋರನೆ ಅಲ್ಲಿಂದ ತೆರಳಿದರೂ. (ಪುಟ ೩೧೮)

ಆ ಅಮಾಯಕ ಹೆಣ್ಣಿನ ಅಗ್ನಿದಿವ್ಯ ಕಥೆ ನಮ್ಮ ಸಂಪ್ರದಾಯದ ಭಯಂಕರ ಮುಖವೊಂದನ್ನು ಅನಾವರಣಗೊಳಿಸುತ್ತದೆ.

ನಿತ್ಯಪಾರಾಯಣದ ಸ್ತೋತ್ರದ ಹಾಡುಗಳ ಪರಿಣಾಮ ಅನುಪಮ. ಇವು ಪುರುಷರಿಗಷ್ಟೇ ಅಲ್ಲ ಮಹಿಳೆಯರಿಗೂ ಅನಿವಾರ್ಯ. ಈ ಬಗೆಗೆ ವಾಗೀಶ್ವರಿ ಶಾಸ್ತ್ರಿ ಅವರ ಅಭಿಪ್ರಾಯ ಹೀಗಿದೆ:

"ಸರಳವಾಗಿ ಸುಲಭವಾಗಿ ರಚಿಸಿರುವ ಈ ನಿತ್ಯಪಾರಾಯಣದ ಹಾಡುಗಳು ಮಹಿಳೆಯ ಮಾನಸಿಕ ಆರೋಗ್ಯಕ್ಕೆ ಮದ್ದಾಗಿವೆ. ಹೆಂಗಸು ಎಂದರೆ ಮನೆ, ಮನೆ ಎಂದರೆ ಸಂಸಾರ. ಸಂಸಾರ ಎಂದರೆ ತಾಪತ್ರಯಗಳ

ಆಗರ. ಈ ಸಂಸಾರರೋಗಕ್ಕೆ ಭಗವದ್ಭಕ್ತಿ ಮತ್ತು ನಾಮಸ್ಮರಣೆಯೇ ಮದ್ದು ಎಂದಿದ್ದಾರೆ.... ಸಂಸಾರವೇ ತನ್ನ ಸರ್ವಸ್ವ ಎಂದು ನಂಬಿ, ತನ್ನ ಜೀವನವನ್ನೇ ಅದಕ್ಕೆ ಅರ್ಪಿಸಿಕೊಂಡ ಮಹಿಳೆಗೂ ನೆಮ್ಮದಿಯ ಬಾಳ್ವೆ ಸಾಧ್ಯ ಎಂಬುದನ್ನು ಈ ದಿಸೆಯ ಕನ್ನಡ ಹಾಡುಗಳು ಎತ್ತಿ ತೋರಿಸಿವೆ ಎಂಬುದು ಅನುಭವದ ಮಾತೂ ಆಗಿದೆ.... ಹಿಂದಿನ ಮಹಿಳೆ ಚಿಕ್ಕಂದಿನಿಂದಲೇ ಇಂತಹ ಸ್ತೋತ್ರದ ಹಾಡುಗಳನ್ನು ಬಾಯಿಪಾಠವಾಗಿ ಕಲಿಯುತ್ತಿದ್ದುದರಿಂದ, ತನ್ನ ನಿತ್ಯ ಕೆಲಸದಲ್ಲಿ ತೊಡಗಿದ್ದರೂ ನಿರರ್ಗಳವಾಗಿ ಬಾಯಲ್ಲಿ ಸ್ತೋತ್ರಗಳು ಸಾಗಿಹೋಗುತ್ತಿದ್ದವು."

ನಿತ್ಯಪಾರಾಯಣದ ಸ್ತೋತ್ರದ ಹಾಡುಗಳು ಮುಂಜಾನೆಯಿಂದಲೇ ಪ್ರಾರಂಭವಾಗುತ್ತದೆ. ಯಾವುದಕ್ಕೂ ಗಣಪತಿಗೇ ಆದ್ಯತೆ. ಉದಾಹರಣೆಗೆ :

ಬೆನಕ ಬೆನಕ ಏಕದಂತ
ಪಚ್ಚೆಕಲ್ಲು ಪಾಣಿವಟ್ಲು
ಮುತ್ತಿನುಂಡೆ ಸ್ವರ್ಣಗಂಟೆ
ಇಂತು ವಿಘ್ನೇಶ್ವರನಿಗೆ
ಇಪ್ಪತ್ತೊಂದು ನಮಸ್ಕಾರಗಳು. (ಪುಟ ೪೦೭)

ದಿನದ ಕೆಲಸ ಮುಗಿಸಿ ಮಲಗುವಾಗ ಹೇಳುವ ಸ್ತೋತ್ರದ ಹಾಡೊಂದು ಹೀಗಿದೆ :

ಅಚ್ಯುತಗೆ ಶರಣೆಂಬೆ ಇಕ್ಕುವೇ ಎಡದ ಮಗ್ಗಲು
ಮನಹೋಗಿ ಮಾಧವನ ಕಾಣ್ಲಿ ।
ಚಿತ್ತ ಹೋಗಿ ಅಚ್ಯುತನ ಕಾಣ್ಲಿ ।

ಕಣ್ಣು ಹೋಗಿ ಸಾಲಿಗ್ರಾಮ ಲಿಂಗಾನ್ ಕಂಡ್ಬರಲಿ ।
ಕಾಲೋಗಿ ಭಾಗೀರಥಿ ಸ್ನಾನ ಮಾಡ್ಬರಲಿ ।
ಅಂಗರಂಗನ್ ಕಾವ್ಲು (ಕಾವಲು) ।
ಬಾಗಿಲ್ಗೆ ಸುಗ್ರೀವನ ಕಾವ್ಲು ।
ನಡುಮನೆ ಬಿಡಾರಕ್ಕೆ ರಾಮಲಕ್ಷ್ಮಣರ ಕಾವ್ಲು ।
ಇಷ್ಟು ಮೀರಿ ಬಂದ ಕಳ್ಳನ್ ತಲೆ ಸಹಸ್ರಹೋಳಾಗ್ಲಿ ।
ಈಶ್ವರಾ ಇಂದಿನ ಕರ್ಮವೆಲ್ಲಾ ನಿನಗರ್ಪಿತ ।
ಶ್ರೀ ಕೃಷ್ಣಾರ್ಪಣಮಸ್ತು । (ಪುಟ ೪೯೭)

'ಹೃದಯ ಸಂಪುಟ' ಗ್ರಂಥದ ವಿಶೇಷ ವಿಭಾಗ ಕಥನಗೀತೆಗಳದು. ಇದನ್ನು ಸಂಪ್ರದಾಯ ಹಾಡುಗಳಲ್ಲಿ ಪ್ರಬಂಧ ಸಾಹಿತ್ಯ ಎಂದು ಕರೆದಿದೆ. ವಾಗೀಶ್ವರಿ ಅವರು ವಿಭಾಗದ ಪ್ರಸ್ತಾವನೆಯಲ್ಲಿ ಹೀಗೆ ಬರೆದಿದ್ದಾರೆ :

"ಈ ಗುಂಪಿನಲ್ಲಿ ಹಾಡುಗಳು ತುಂಡುತುಂಡಾದ ಹಾಡುಗಳೂ ಅಲ್ಲ ಅಥವಾ ಒಂದೇ ಧ್ವನಿಯಲ್ಲಿ ಹೇಳುವ ಹಾಡುಗಳೂ ಅಲ್ಲ. ಇವು ಹೆಸರಿಗೆ ತಕ್ಕಂತೆ ಬಹುವಿಸ್ತಾರವಾಗಿದ್ದು, ಯಾರು? ಯಾರಿಗೆ? ಯಾವಾಗ? ಏಕೆ? ಹೇಳಿದರು ಮುಂತಾದವುಗಳನ್ನೆಲ್ಲಾ ತಿಳಿಸಿ, ಮಧ್ಯೆ ಮಧ್ಯೆ ಪೂರ್ವಕಥೆಗಳು, ಉಪಾಖ್ಯಾನಗಳು ಸೇರಿರುವ ಅತಿದೊಡ್ಡ ಹಾಡುಗಳು. ಇದರಲ್ಲಿ ಪ್ರತಿನೆಲೆಗೂ ಧ್ವನಿ ಬದಲಾಗುತ್ತದೆ. ಅಲ್ಲದೆ ಮಧ್ಯೆ ಮಧ್ಯೆ ವಚನಗಳೂ ಕಂದಗಳೂ ಆರ್ಯಗಳೂ ವೃತ್ತಗಳೂ ಇದ್ದು ವೈವಿಧ್ಯ ಮತ್ತು ರಸಮಯವಾಗಿರುವ ದೊಡ್ಡ ಭಾಗ.... ಪ್ರತಿಯೊಂದು ಕವಿತೆಯಲ್ಲಿಯೂ ರಾಗ ರಸಭಾವಗಳನ್ನು ಕಾಣುತ್ತೇವೆ. ಇವುಗಳನ್ನು ಸುಲಭವಾಗಿ ಕಲಿಯಲು

ಆಗುವುದಿಲ್ಲ... ಕಲಿಯಬೇಕಾದರೆ ಶ್ರದ್ಧೆ ತಾಳ್ಮೆ ಜ್ಞಾಪಕಶಕ್ತಿ ತುಂಬಬೇಕಾಗುತ್ತದೆ... ಈ ದಿಸೆಯಲ್ಲಿ ಹಿಂದಿನ ಮಹಿಳೆ ಇಂತಹ ಹಾಡುಗಳನ್ನು ಕಂಠಪಾಠವಾಗಿ ಕಲಿತು, ಸ್ವತಃ ವ್ಯಖ್ಯಾನ ಮಾಡುವಷ್ಟು ವಾಗ್ಮಿಯೂ ಪ್ರಾಜ್ಞಳೂ ಆಗಿದ್ದಳೆಂಬುದಕ್ಕೆ ಈ ಹಾಡುಗಳು ಇಷ್ಟುಕಾಲವಾದರೂ ಉಳಿದುಕೊಂಡಿರುವುದೇ ಸಾಕ್ಷಿ."

ಸುಪ್ರಸಿದ್ಧ ಬಭ್ರುವಾಹನ ಕಾಳಗ ಯಕ್ಷಗಾನ ಕಥನಗೀತೆಯಲ್ಲಿ ಬಭ್ರುವಾಹನ ಪಾರ್ಥರ ವೀರಾವೇಶದ ಒಂದು ಸಂಭಾಷಣಾ ಸಂದರ್ಭ ಹೀಗಿದೆ :

ಬಭ್ರುವಾಹನ–

ಫುಲ್ಲ ಫಲುಗುಣ ಕದನ । ಬೇಡಾವೆನ್ನಲಿ ॥ ಹರ
ನಲ್ಲಿ ಪಡೆದಾ ಬಾಣವಾ । ತೋರೋ ನಿನ್ನಲೀ ॥

ಪಾರ್ಥ–

ಹರನ ಪಾಶುಪತಾಸ್ತ್ರಕೆ ಗುರಿಯೆ ನೀನು ।
ಬೇಡ ಓಡಿಹೋಗೆನ್ನುತಾ ಎಸೆದ ವಾರಣಾಸ್ತ್ರವಾ ॥

ಬಭ್ರುವಾಹನ–

ಯಾತಕೆ ಹುಲ್ಲುಕಣೆಗಳ್ ಎನುತಾ ಖಂಡ್ರಿಸಿ ಬಹಳ
ಘಾತಿಸಿದಾ ಪಾರ್ಥನಾ ಸಾರಥಿಯಾ ಖಂಡ್ರಿಸಿ ॥

ಪದ್ಯ –

ಹಲವು ವೀರರ ಗೆಲಿದ ಕಣಗಳು ।
ಕಳಚಿದುವು ಕಾಳಗದಿ ಕೌರವಾ ।
ಕುಲವ ತೀರ್ಚಿದೆನೆಂಬ ಅಸ್ತ್ರಗಳು ಹುಸಿಯಾಯ್ತು ॥
ಎಲವೋ ಇನ್ನೆಲ್ಲಿಹುದೋ ಚಾಪದಾ ।

ಬಲು ಭಯಾರತಕ ಕಾಣೆ ಶಿವಶಿವ ।
ಫಲುಗುಣನ ಸಾರಥಿ ಮುರಿದು ಭಯಗೊಂಡಿತಾ ರಣಾಗ್ರದಲೀ ॥

(ಪುಟ ೫೬೭)

ಬಭ್ರುವಾಹನ ಕಾಳಗ ಕಥಾಕಾವ್ಯ ರಸಭರಿತವಾದ ಕಥಾನಕವಾಗಿದೆ; ಗಾಯನಕ್ಕೂ ಅಭಿನಯಕ್ಕೂ ಅದ್ಭುತವಾಗಿದೆ.

ಚೋರಕಥೆ ಯಕ್ಷಗಾನ ಕಥನಗೀತೆಯಲ್ಲಿ ಸೋಮಶೇಖರ ಚಿತ್ರಶೇಖರರು ವೀರಕಂಕಣ ಕಟ್ಟಿ ತಾಯಿಯಿಂದ ಬೀಳ್ಕೊಳ್ಳುವ ಸಂದರ್ಭ ಅಟ್ಟತಾಳ ಅರ್ಧರೇಕು ರಚನೆಯಲ್ಲಿದೆ :

ಉಟ್ಟ ಚಲ್ಲಣ ದಟ್ಟಿ ಕಟ್ಟೀ ವಂಕುಡಿಯಾ ।
ಪಟ್ಟೆಯ ಹೊದ್ದೂಲ ಪಟ್ಟೇಯ ಸುತ್ತೀ ॥

ಅಂಜನ ಅದೃಶ್ಯದ ತಿಲಕವನಿಟ್ಟು ಚವ್ವ ।
ಕುಳಿ ಕಂಠಮಾಲೆ ಪದಕಾವ ಧರಿಸೀ ॥

ಬಿರಿದೀನ ಕಾಲ ಪೆಂಡೆಯವನಳವಡಿಸೀ ।
ಚಂದ್ರಾಯುಧವು ಕನ್ನಕತ್ತರೀಯ ಪಿಡಿದೂ ॥

ಮಂಕುಬೂದಿಯು ಕಣ್ಣುಕಟ್ಟೂಗಳಿಂದ ।
ವಾಕಟ್ಟು ಸಭೆಕಟ್ಟು ಸ್ತ್ರೀವಶ್ಯವನ್ನು ॥

ರಾಜವಶ್ಯಾ ಜನಾವಶ್ಯದಿಂದಲಿ ಸರ್ವ ।
ಸನ್ನಾಹದಿಂ ಸಾಹಸವಂತರಾಗೀ ॥

(ಪುಟ ೬೯೮)

'ಹೃದಯ ಸಂಪುಟ'ದ ಕಥನಗೀತೆಗಳು ವಿಶೇಷ ಅಧ್ಯಯನಕ್ಕೆ ಅವಕಾಶ ನೀಡುತ್ತವೆ. ಈ ಕಥನಕಾವ್ಯಗಳು ಸಂಪ್ರದಾಯಸ್ಥ ಬ್ರಾಹ್ಮಣ ಸ್ತ್ರೀಯರಿಗೆ ಪ್ರಿಯುವಾದದ್ದು, ಅವರ ಕಂಠಸ್ಥವಾದದ್ದು, ಏಕಾದಶಿ, ಶಿವರಾತ್ರಿ, ಋಷಿಪಂಚಮಿಗಳಲ್ಲಿ ಹಾಡುಗಾರಿಕೆಗೆ ರೂಢಿಗೆ ಬಂದಿದ್ದು ವಿಸ್ಮಯಕಾರಿಯಾಗಿದೆ. 'ಕಸ್ತೂರಿಸಿದ್ಧ'ನೆಂಬ ಕಾಕೋದ್ಗಿರಿಯ ಬ್ರಾಹಣೇತರ ಕವಿ (ಬಹುಶಃ ಲಿಂಗಾಯಿತ) ಬರೆದ ಚೋರಕಥೆ ಎಂಬ ಯಕ್ಷಗಾನ ಕಾವ್ಯ ಬ್ರಾಹ್ಮಣ ಸ್ತ್ರೀಯರ ಸಂಪ್ರದಾಯದ ಹಾಡುಗಳ ಜೊತೆಗೆ ಸೇರಿರುವುದು ಆಶ್ಚರ್ಯ ಹುಟ್ಟಿಸುತ್ತದೆ. ಚೋರಕಥೆ ವೈವಿಧ್ಯ ವಸ್ತು ವಿಷಯ ಘಟನೆಗಳಿಂದ ಕೂಡಿದ ಸ್ವಾರಸ್ಯಮಯ ಕಥೆಯಾಗಿದೆ.

ಚೋರಕಥೆ ಮೂಲತಃ ಒಂದು ಜನಪದ ಕಥೆ. ಚೋರಕಥೆ, ಸೋಮಶೇಖರ ಚಿತ್ರಶೇಖರ, ಸುವರ್ಣಾದೇವಿ ಎಂಬ ಬೇರೆ ಬೇರೆ ಹೆಸರುಗಳಿಂದ ಈ ಕಥೆ ರಾಜ್ಯದ ಹಲವು ಕಡೆ ಪ್ರಚಾರದಲ್ಲಿದೆ. ಈ ಕಥೆಯ ಆಧಾರದಿಂದ ಯಕ್ಷಗಾನ ಕಾವ್ಯ, ನಾಟಕ ಹುಟ್ಟಿದೆ. ಇದರ ಯಾವ ಅಂಶ ಬ್ರಾಹ್ಮಣ ಸ್ತ್ರೀಯರಿಗೆ ಇಷ್ಟವಾಯಿತೋ ಹೇಳಲಾಗುವುದಿಲ್ಲ. ಈ ಕಥೆಗೆ ಚಿತ್ರದುರ್ಗ ಪರಿಸರದ ಚಾರಿತ್ರಿಕ ವ್ಯಕ್ತಿ ಘಟನೆ ಕಥೆಯ ಸಂಪರ್ಕವೂ ಇರುವಂತಿದೆ. ಈ ಬಗೆಗೆ ಅಧ್ಯಯನ ನಡೆಯಬೇಕು.

ಸಂಪ್ರದಾಯದ ಹಾಡುಗಳಲ್ಲಿ ಮಕ್ಕಳ ಸಾಹಿತ್ಯವೂ ಉಂಟು. ಅದು ನಿರ್ದಿಷ್ಟ ಸಮಯ, ಆಚರಣೆಗೆ ಸಂಬಂಧಿಸಿದ್ದು; ವಿಶೇಷವಗಿ ಮಕ್ಕಳು ಮತ್ತು ಸ್ತ್ರೀಯರ ಪ್ರವೇಶದ್ದು; ಶ್ರಾವಣಮಾಸ ಹಾಗೂ ಭಾದ್ರಪದ ಮಾಸದ ಚಟುವಟಿಕೆಗಳು. 'ನವರಾತ್ರಿ' ದೊಡ್ಡವರಿಗೆ ವಿಶೇಷ, 'ಬೊಂಬೆಹಬ್ಬ' ಮಕ್ಕಳಿಗೆ ವಿಶೇಷ. ಆ ಕುರಿತು ವಾಗೀಶ್ವರಿ ಶಾಸ್ತ್ರಿ ಹೀಗೆ ಪ್ರಸ್ತಾಪಿಸಿದ್ದಾರೆ.

"ಬೊಂಬೆಗಳಿಗೆ ಅಲಂಕಾರಗಳನ್ನು ಮಾಡಿ ಪ್ರದರ್ಶನಕ್ಕೆ ಪೂಜೆಗೆ ಅಣಿಮಾಡುವುದೂ ಸಣ್ಣ ಸಣ್ಣ ಬೋಗುಣಿಗಳಲ್ಲಿ ರಾತಿ ಬತ್ತಗಳನ್ನು ಒಗ್ಗುಹಾಕಿ ಬೆಳೆಸಿ ಅಲಂಕಾರಕ್ಕೆ ಇಡುವುದೂ ದೊಡ್ಡ ದೊಡ್ಡ ಹಜಾರಗಳಲ್ಲಿ ಅಂತಸ್ತುಗಳನ್ನು ನಿರ್ಮಿಸಿ, ಕಲಾತ್ಮಕತೆಯಿಂದ ಬೊಂಬೆಗಳನ್ನು ಜೋಡಿಸಿ ಕೂರಿಸುವುದೂ ಒಂದು ಸಂಪ್ರದಾಯ. ಕೆರೆ ಬಾವಿ ಪೈರುಪಚ್ಚೆ ಪೇಟೆ ಕೋಟೆ ಗುಡಿಗೋಪುರ, ಕಾಡುಮೇಡು, ರಾಜರಾಣೀ, ಅಂಗಡೀ ಸಾಲು, ಅರಮನೆ ಸೈನ್ಯ ಹೀಗೆ ಅದನ್ನೇ ಒಂದು ಸಣ್ಣ ಪ್ರಪಂಚದಂತೆ ನಿರ್ಮಿಸಿ, ಮಕ್ಕಳಿಗೆ ದೇಶ ದೊರೆ ವ್ಯಾಪಾರ ವ್ಯವಸಾಯ ವ್ಯವಹಾರ ಇತ್ಯಾದಿ ಸಾಮಾಜಿಕ ಪ್ರಜ್ಞೆ ಮೂಡಲು ಅವಕಾಶ ಈ ಬೊಂಬೆ ಹಬ್ಬದಲ್ಲಿದೆ.... ಪೂಜೆಗೆ ಹಾಡು ಹಸೆಗಳು ಹೆಣ್ಣುಮಕ್ಕಳ ಪಾಲಿಗೆ ಸೇರಿದ್ದು."

ಗ್ರಾಮೀಣ ಜನಪದದಲ್ಲಾಗಲೀ ಬ್ರಾಹ್ಮಣ ಜನಪದದಲ್ಲಾಗಲೀ ಮಕ್ಕಳ ಸಾಹಿತ್ಯ ಹೇರಳವಾಗಿದೆ; ವೈವಿಧ್ಯವಾಗಿದೆ; ಮಕ್ಕಳ ಜ್ಞಾನಾರ್ಜನೆಗೆ ಸಹಾಯಕವಾಗಿದೆ. ಎರಡುಗುಂಪಿನಲ್ಲಿ ಮಕ್ಕಳು ಹಾಡಿಕೊಳ್ಳುವ ಪ್ರಶ್ನೋತ್ತರ ರೂಪದ ಹಾಡೊಂದು ಹೀಗಿದೆ: ಒಂದೊಂದು ಸಾಲನ್ನು ಒಂದೊಂದು ಗುಂಪಿನವರು ಹೇಳಿದರೆ ಅರ್ಥಪೂರ್ಣವಾಗಿರುತ್ತದೆ:

ಒಂದೆಂಬೋದು ಚಂದ್ರಮಾಲೇ ಸರ
ಎರಡೆಂಬುದೇನೇ ಹೆಸರ್ಹೇಳೆ?

ಎರಡೆಂಬೋದು ಗರುಡಮಾಲೇ ಸರ
ಮೂರೆಂಬುದೇನೇ ಹೆಸರ್ಹೇಳೆ?

ಮೂರೆಂಬೋದು ಮುತ್ತಿನಸರ ಕಣೇ
ನಾಲ್ಕೆಂಬುದೇನೇ ಹೆಸರ್ಹೇಳೆ?

ನಾಲ್ಕೆಂಬೋದು ಆಕಳ ಮೊಲೆ ಕಣೆ
ಐದೆಂಬುದೇನೇ ಹೆಸರ್ಥೇಳೆ?

ಐದೆಂಬೋದು ಕೊಯ್ದುಮಲ್ಲೆ ಸರ
ಆರೆಂಬುದೇನೇ ಹೆಸರ್ಥೇಳೆ?

ಆರೆಂಬೋದು ಹಾರುವಹಕ್ಕಿ ಕಣೆ
ಏಳೆಂಬುದೇನೇ ಹೆಸರ್ಥೇಳೆ?

ಏಳೆಂಬೋದು ಏಳ್ಹೆಡೆ ಸರ್ಪ ಕಣೆ
ಎಂಟೆಂಬುದೇನೇ ಹೆಸರ್ಥೇಳೆ?

ಎಂಟೆಂಬೋದು ಕಂಠಮಾಲೇ ಸರ
ಒಂಬತ್ತೆಂಬುದೇನೇ ಹೆಸರ್ಥೇಳೆ?

ಒಂಬತ್ತೆಂಬೋದು ತುಂಬಿದ ಕೊಡ ಕಣೆ
ಹತ್ತೆಂಬುದೇನೆ ಹೆಸರ್ಥೇಳೆ?

ಹತ್ತೆಂಬೋದು ಕಿತ್ತಳೆ ಬನ ಕಣೆ
ಹನ್ನೊಂದೆಂಬುದೇನೇ ಹೆಸರ್ಥೇಳೆ?

ಹನ್ನೊಂದೆಂಬೋದು ಹೊನ್ನಿನ ಉಂಗ್ರ ಕಣೆ
ಇನ್ನೊಂದ್ಹೇಳೆ ಗಂಡನ್ಹೆಸರಾ?
ಮತ್ತೊಂದ್ಹೇಳೆ ಮಾವನ್ಹೆಸರಾ?
ಮಗುದೊಂದ್ಹೇಳೆ ಅತ್ತೆ ಹೆಸರಾ? (ಪುಟ ೮೩೭)

ಎಲ್ಲರೂ 'ಬಸವ ಬಸವ' ಎಂದು ಹೇಳಿ ಒಳಗೆ ಹೋಗುವರು. ಇದರಲ್ಲಿ ಆಟದ ಜೊತೆಗೆ ಪಾಠವೂ ಇರುವುದನ್ನು ಗಮನಿಸಬಹುದು. ಹೊಸ ಹೊಸ ಶಬ್ದ ಹಾಗೂ ವಿಷಯದ ವಿಚಾರವೂ ಇದೆ. ಮಕ್ಕಳ ಗೀತೆಗಳ ಉದ್ದೇಶ ಬಹುಮುಖಿಯಾದದ್ದು.

ವಾಗೀಶ್ವರಿ ಶಾಸ್ತ್ರಿ ಅವರು ಬಾಲ್ಯದಿಂದಲೂ ಸಂಪ್ರದಾಯದ ಹಾಡುಗಳಿಗೆ ಮಾರುಹೋದವರು. ಮುತ್ತಜ್ಜಿ, ಅಜ್ಜಿ, ಅತ್ತೆ, ಅಕ್ಕ, ನೆರೆಹೊರೆ ಮುತ್ತೈದೆಯರಿಂದ ಹಾಡುಗಳನ್ನು ಕೇಳಿ, ಕಲಿತು ಬೆಳೆದವರು. ಅಗಾಧ ನೆನಪಿನ ಶಕ್ತಿಯನ್ನು ಪಡೆದಿರುವ ವಾಗೀಶ್ವರಿ ಅವರು ಕೇಳಿ ಕಲಿತಿದ್ದನ್ನು ನೆನಪಿನೋವರಿಯಲ್ಲಿ ರಕ್ಷಿಸಿ, ಕೇಳಿದವರ ಮುಂದೆ ಹಾಡಿ ಸಂತೋಷಿಸಿ, ಅಪರೂಪದ ಹಾಡುಗಳನ್ನು ಉಳಿಸಿಕೊಂಡು ಬಂದವರು. ಅವುಗಳನ್ನು ಅಕ್ಷರರೂಪಕ್ಕಿಳಿಸಿ, ಗ್ರಂಥರೂಪದಲ್ಲಿ ಪ್ರಕಟಿಸಿ, ಕನ್ನಡ ಸಾರಸ್ವತ ಲೋಕಕ್ಕೆ ಅರ್ಪಿಸಿದವರು.

ವಾಗೀಶ್ವರಿ ಶಾಸ್ತ್ರಿ ತಾವು ಸಂಪ್ರದಾಯದ ಹಾಡುಗಳನ್ನು ಕಲಿಯುವುದರ ಜೊತೆಗೆ ತಮ್ಮ ಮಕ್ಕಳು ಮೊಮ್ಮಕ್ಕಳಿಗೂ ಇತರ ಆಸಕ್ತರಿಗೂ ಕಲಿಸಿದರು. ಪರೋಕ್ಷವಾಗಿ ಮೌಖಿಕ ಗೀತಸಾಹಿತ್ಯ ಜೀವಂತವಾಗಿ ಮುಂದುವರಿಯಲು ಕಾರಣರಾದರು. ಇದು ಮೌಖಿಕ ಸಾಹಿತ್ಯವನ್ನು ಉಳಿಸಿಕೊಳ್ಳುವ ಉತ್ತಮ ಮಾರ್ಗ. ಇಂಪಾಗಿ ಹಾಡಿ, ಹಾಡಿಸಿ, ಅವು ಇತರ ಕೇಳುಗರಿಗೂ ಸಂತೋಷ ನೀಡಲಿ ಎಂಬ ಸದುದ್ದೇಶದಿಂದ ಹಲವು ಧ್ವನಿಸುರುಳಿಗಳನ್ನೂ ವಿಡಿಯೋ ಸಿಡಿಗಳನ್ನೂ ಸಿದ್ಧಪಡಿಸಿ ಬಿಡುಗಡೆ ಮಾಡಿದ್ದಾರೆ. ಇವು ಹೊರ ದೇಶಗಳಲ್ಲೂ ಪ್ರಚಾರದಲ್ಲಿವೆ. ಉದಾಹರಣೆಗೆ: ಜೋಜೋ ಕಂದ, ಅಕ್ಷರ ಕಲಿ ನೀ ಕಂದ, ಸುಲಗ್ನಾ ಸಾವಧಾನ, ಮದುವೆಯ ಮೋಜಿನ ಹಾಡುಗಳು, ಗೌರಿ ಹಬ್ಬದ ಹಾಡುಗಳು, ಎದ್ದು ಬಾ ಮುದ್ದು ಗಣಪ, ಆರತಿಯ ಮಗಳು, ವರವಕೊಡು ವರಲಕ್ಷ್ಮಿ, ಅನಂತನ ಹಬ್ಬದ ಹಾಡುಗಳು ಮೊದಲಾದವು.

ಬ್ರಾಹ್ಮಣೀ ಸಂಪ್ರದಾಯದ ಹಾಡುಗಳಲ್ಲಿ ಪುರಾಣ ಪರಿವೇಷ ಚಿತ್ರಗಳು ದಟ್ಟವಾಗಿವೆ; ಪೌರಾಣಿಕ ಪಾತ್ರ ಮತ್ತು ಸನ್ನಿವೇಶಗಳು ಸಮಕಾಲೀನ ಸಾಮಾಜಿಕ ಬದುಕಿಗೆ ಸ್ಫೂರ್ತಿಯಾಗಿವೆ; ಅದಮ್ಯ ಜೀವನಪ್ರೀತಿ, ಆದರ್ಶ ವ್ಯಕ್ತಿವಿಕಾಸದ ಸೆಲೆಗಳು ಅನನ್ಯವಾಗಿ ಹೊರಹೊಮ್ಮಿವೆ; ಸ್ತ್ರೀಸಹಜವಾದ ರೋಚಕ ಧಾರ್ಮಿಕ ಆಚರಣಾತ್ಮಕ ಪರಿಕಲ್ಪನೆಗಳು ಪುಷ್ಪಗುಚ್ಛಗಳಂತೆ ಅರಳಿ ಪರಿಮಳ ಬೀರಿವೆ. ಅವುಗಳಲ್ಲಿ ಸಾಹಿತ್ಯಕ ಪರಿಕರಗಳಿಗಿಂತ ಸಾಂಸ್ಕೃತಿಕ ಪರಿಕರಗಳೇ ಅಧಿಕವಾಗಿವೆ. ಶಬ್ದ ಚಮತ್ಕಾರಗಳಿಗೂ ಕೊರತೆಯಿಲ್ಲ.

ಸಮೃದ್ಧವಾಗಿರುವ ಕನ್ನಡ ಜಾನಪದ ಸಾಗರದಲ್ಲಿ 'ಬ್ರಾಹ್ಮಣ ಜಾನಪದ' ವಾಹಿನಿಯೂ ಸೇರಿದೆ. ಅವಜ್ಞೆಗೆ ಒಳಗಾಗಿದ್ದ ಬ್ರಾಹ್ಮಣ ಜಾನಪದವನ್ನು ಸಂಗ್ರಹಿಸಿ ಪ್ರಕಟಿಸಿ ಗಮನಸೆಳೆದವರಲ್ಲಿ ಶ್ರೀ ಮತಿಘಟ್ಟ ಕೃಷ್ಣಮೂರ್ತಿ ಅವರನ್ನು ಬಿಟ್ಟರೆ, ಶ್ರೀಮತಿ ವಾಗೀಶ್ವರಿ ಶಾಸ್ತ್ರಿ ವಿಶೇಷ ಉಲ್ಲೇಖಕ್ಕೆ ಅರ್ಹರಾಗಿದ್ದಾರೆ. ಈ ಇಬ್ಬರೂ ಬ್ರಾಹ್ಮಣ ಜನಪದ ಗೀತ ಪ್ರಕಾರಕ್ಕೆ ನೀಡಿರುವ ಕೊಡುಗೆ ಅಪಾರ. ವಾಗೀಶ್ವರಿ ಶಾಸ್ತ್ರಿ ಅವರ ಬೃಹತ್ ಸಂಪುಟದಲ್ಲಿ ಬ್ರಾಹ್ಮಣ ಸಂಪ್ರದಾಯದ ಬಹುತೇಕ ಎಲ್ಲ ಸಂಪ್ರದಾಯದ ಹಾಡುಗಳೂ ಸೇರಿರುವುದು ಅಧ್ಯಯನಕಾರರಿಗೆ ಅಕ್ಷಯನಿಧಿ ಸಿಕ್ಕಂತಾಗಿದೆ. ಮನೆಯ ಹೊಸಿಲು ದಾಟದೆ, ಸಂಪ್ರದಾಯದ ನೆರಳಲ್ಲೇ ಜೀವನಸಾಗಿಸುತ್ತಿದ್ದ ಬ್ರಾಹ್ಮಣ ಗೃಹಿಣಿಯರಲ್ಲಿ ಇಷ್ಟೊಂದು ಅಧಿಕ ಸಂಖ್ಯೆಯ ಸಂಪ್ರದಾಯದ ಹಾಡುಗಳು ಉಳಿದುಕೊಂಡು ಬಂದಿವೆ ಎನ್ನುವುದೇ ಆಶ್ಚರ್ಯದ ಸಂಗತಿ. ಬ್ರಾಹ್ಮಣ ಸಮಾಜದ 'ಹಿತ್ತಲಮನೆ'ಯ ಸಾಹಿತ್ಯ, ಕನ್ನಡ ಜನಪದ ಸಾಹಿತ್ಯ ಸಂಪತ್ತನ್ನು ವೃದ್ಧಿಸಿದೆ ಎಂಬುದು ವಾಸ್ತವ ಸತ್ಯ.

'ಹೃದಯ ಸಂಪುಟ' ಸುಪುಷ್ಟ ಗ್ರಂಥದಿಂದ ವಾಗೀಶ್ವರಿ ಶಾಸ್ತ್ರಿ ಅವರು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಹೆಸರಾದರು. ಅದರಿಂದ ಅವರಿಗೆ

ಪ್ರಶಸ್ತಿ ಬಿರುದುಗಳೂ ಲಭ್ಯವಾದವು. 'ಹೃದಯ ಸಂಪುಟ' ಗ್ರಂಥಕ್ಕೆ 'ಕಾವ್ಯಾನಂದ ಪುರಸ್ಕಾರ' (೧೯೮೫), ಕರ್ನಾಟಕ ಜಾನಪದ ಅಕಾಡೆಮಿ ಪ್ರಶಸ್ತಿ (೧೯೯೨), ಬೆಂಗಳೂರು 'ಶಾಶ್ವತಿ' ಸಂಸ್ಥೆಯಿಂದ 'ಕರ್ನಾಟಕ ಕಲ್ಪವಲ್ಲಿ' ಪ್ರಶಸ್ತಿ (೧೯೯೪), ಕರ್ನಾಟಕ ಜಾನಪದ ಪರಿಷತ್ತಿನ ಜಾನಪದ ಲೋಕೋತ್ಸವ ಪ್ರಶಸ್ತಿ (೨೦೧೦)ಗಳು ದೊರಕಿವೆ. ಅಮೆರಿಕ ಪ್ರವಾಸಕ್ಕೆ ಹೋಗಿದ್ದಾಗ ನ್ಯೂಯಾರ್ಕ್ ಕನ್ನಡ ಕೂಟದವರು ಸನ್ಮಾನಿಸಿ ಗೌರವಿಸಿದರು. ಸಿಂಗಪುರ ಪ್ರವಾಸದ ಅನುಭವವೂ ಲೇಖಕಿಗಿದೆ. ಆಕಾಶವಾಣಿ ಹಾಗೂ ದೂರದರ್ಶನ ಕಾರ್ಯಕ್ರಮಗಳಿಂದಲೂ ಜನರಿಗೆ ಪರಿಚಿತರಾಗಿದ್ದಾರೆ.

ವಾಗೀಶ್ವರಿ ಶಾಸ್ತ್ರಿ ಸಂಪ್ರದಾಯ ಹಾಡುಗಳ ಮಹಾಕೋಶ. ದೊಡ್ಡ ಸಂಸಾರದ ಗೃಹಣಿ, ತನ್ನ ಸಂಸಾರದ ಜವಾಬ್ದಾರಿಯ ಜೊತೆಗೆ, ಇಷ್ಟೊಂದು ಹಾಡುಗಳನ್ನು ಕಲಿಯಲು ಸಾಧ್ಯವೇ ಕಲಿತಿದ್ದನ್ನು ಮರೆಯದೆ ಜ್ಞಾಪಕದಲ್ಲಿ ಇಟ್ಟುಕೊಳ್ಳುವುದು ಸಾಧ್ಯವೇ ಎಂದು ವಿಸ್ಮಯವಾಗುತ್ತದೆ. ಅವರದು ಕಂಚಿನ ಕಂಠಶ್ರೀ. ಅವರ ನೆನಪು ನಿರರ್ಗಳಧಾರೆ. ಅವರ ಮಾತುಗಾರಿಕೆ, ಹಾಡುಗಾರಿಕೆ ಸರಾಗ, ಸಮೃದ್ಧ. ಈ ಅಪೂರ್ವ ಸಾಧನೆಯ ಹಾಡುಗಾರ್ತಿ ಕಲಿತುದನ್ನೆಲ್ಲ ಬರೆದು ಪ್ರಕಟಿಸಿಲ್ಲ. ಇನ್ನೂ ಎಷ್ಟೋ ಹಾಡುಗಳು ಅವರ ಮನದೋವರಿಯಲ್ಲಿ ಉಳಿದುಕೊಂಡಿವೆ. ಕೇಳುಗರು ಬಯಸಿದಾಗ ಅಲೆಅಲೆಯಾಗಿ ಹೊರಹೊಮ್ಮುತ್ತವೆ. ಎಷ್ಟು ಹಾಡಿದರೂ ಅವರ ಉತ್ಸಾಹ ಕುಗ್ಗುವುದಿಲ್ಲ. ಎಷ್ಟು ಹಾಡಿದರೂ ಅವರ ಹಾಡುಗಳ ಬತ್ತಳಿಕೆ ಮುಗಿಯುವುದಿಲ್ಲ. ವಾಗೀಶ್ವರಿ ಹೆಸರಿಗೆ ತಕ್ಕಂತೆ 'ಸಾವಿರಾರು ಪದಗಳ ಸರಸ್ವತಿ', 'ವಾಗರ್ಥ ಸಂಪನ್ನೆ', 'ಸಂಸ್ಕೃತಿ ಸುಶೀಲೆ', ಸಂಪ್ರದಾಯ ಗೀತಗಾಯನ ಕೋಗಿಲೆ. ಅವರು ತೆಲುಗು ಭಾಷೆಯ ಸಂಪ್ರದಾಯದ ಹಾಡುಗಳನ್ನೂ ಸುಶ್ರಾವ್ಯವಾಗಿ ಹಾಡುವುದುಂಟು.

ವಾಗೀಶ್ವರಿ ಶಾಸ್ತ್ರಿ ಅವರದು ದೈವದತ್ತವಾದ, ಆಕರ್ಷಕವಾದ ಕಂಠಶ್ರೀ; ಹಾಗಾಗಿ ಹಾಡುಗಾರಿಕೆಯಲ್ಲಿ ತನ್ಮಯತೆ. ಅನನ್ಯ ನೆನಪಿನ ಶಕ್ತಿ; ಹಾಗಾಗಿ ಎದೆಯ ತುಂಬ ಹಾಡು, ಜೀವನವೆಲ್ಲಾ ಹಾಡುಗಾರಿಕೆಯಲ್ಲಿ ತೊಡಗಿದರೂ ಬತ್ತಿಹೋಗದ ಉತ್ಸಾಹ. ಸಂಪ್ರದಾಯ ಪರಿಸರದ ನಡುವೆಯೇ, ಸಂಸಾರದ ಜವಾಬ್ದಾರಿ ಸಂಗಡವೇ ಸ್ವಶ್ರಮದಿಂದ ಸಾಹಿತ್ಯಸೃಷ್ಟಿ. ಅದರಿಂದ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಲಾಭ.

ವಾಗೀಶ್ವರಿ ಶಾಸ್ತ್ರಿ ಅವರು ಅಸಾಧಾರಣ ದೈವಭಕ್ತರು; ಕುಲದೈವ ಹಾಗೂ ಇಷ್ಟದೈವ ನಿಷ್ಠರು. ತಲೆತಲಾಂತರದಿಂದ ರೂಢಿಗೆ ಬಂದಿರುವ ಧಾರ್ಮಿಕಶ್ರದ್ಧೆಯಲ್ಲಿ ಅಚಲವಾದ ನಂಬಿಕೆಯುಳ್ಳವರು. ಬದುಕಿನ ಆಗುಹೋಗುಗಳನ್ನು ಅಕ್ಕಿಹೆಬ್ಬಾಳಿನ ನರಸಿಂಹಸ್ವಾಮಿಗೆ ಅರ್ಪಿಸಿ ನೆಮ್ಮದಿಯಿಂದಿರಬಯಸಿದವರು. ಹೆಣ್ಣಿಗಾಗಲೀ ಗಂಡಿಗಾಗಲೀ ದೈವಭಕ್ತಿ ಅಗತ್ಯವೆಂಬುದು ಅವರ ನಂಬಿಕೆ.

ವಾಗೀಶ್ವರಿ ಮುತ್ತೈದೆತನಕ್ಕೆ ಮುಗಿಬಿದ್ದವರು. ಮುತ್ತೈದೆತನದ ಗೌರವಾದರಗಳಿಗೆ ಪಾತ್ರರಾಗಿದ್ದವರು. ಮುತ್ತೈದೆ ಸಾವು ಬಯಸಿದ್ದವರು. ಆದರೆ ಗಂಡ ತೀರಿಕೊಂಡಾಗ (೧೯೯೩) ವೈಧವ್ಯ ದುಃಖಕ್ಕೆ ಒಳಗಾದರು. ಮಾಮೂಲಿ ನೋವಿನ ಜೊತೆಗೆ, ತಮ್ಮ ಜೀವನದ ಅವಿಭಾಜ್ಯ ಅಂಗವಾಗಿದ್ದ, ಮಂಗಳ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಹಾಡುತ್ತಿದ್ದ ಅವಕಾಶದಿಂದ ವಂಚಿತರಾದದ್ದು ಅನಾಥಪ್ರಜ್ಞೆಗೆ ದೂಡಿತು; ಅವರ್ಣನೀಯ ತಳಮಳ ಹುಟ್ಟಿಸಿತು. ಸಾರ್ವಜನಿಕ ಗೀತಗಾಯನ ನಿಲ್ಲಿಸಿ ಏಕಾಂತ ಗೀತಗಾಯನಕ್ಕೆ ಒಗ್ಗಿಕೊಂಡರು. ಆ ನೆಪದಲ್ಲಿ ಗದ್ಯಬರವಣಿಗೆಗೆ ತೊಡಗಿದರು.

ವಾಗೀಶ್ವರಿ ಶಾಸ್ತ್ರಿ ಅವರು ಸಂಪ್ರದಾಯದ ಹಾಡುಗಳು ಗ್ರಂಥವಲ್ಲದೆ ಇತರ ಗ್ರಂಥಗಳನ್ನೂ ಬರೆದು ಪ್ರಕಟಿಸಿ ಕನ್ನಡ ಸಾರಸ್ವತಲೋಕದಲ್ಲಿ ಗುರುತಿಸಿಕೊಂಡಿದ್ದಾರೆ. ಉದಾಹರಣೆಗೆ : ಕರ್ನಾಟಕದ ಹಬ್ಬಗಳು (೧೯೮೩), ಹಿರಿಯರು ಹೇಳಿದ ಕತೆಗಳು ಭಾಗ–೧ (೧೯೮೬), ಸುಲಭ ಸಾಂಪ್ರದಾಯಿಕ ವಿವಾಹ (೧೯೯೩), ಕೀರ್ತನ ಕೇಸರಿ ಕೊಣನೂರು ಶ್ರೀಕಂಠಶಾಸ್ತ್ರಿಗಳ ಜೀವನ ಚರಿತ್ರೆ (೧೯೯೩), ಹಿಂದೂ ಸ್ತ್ರೀ : ಚಿತೆಯಿಂದ ಚಿಂತೆಗೆ (೧೯೯೫), ಸಿರಿಸಿಂಗಾರದ ಸಿಂಗಪುರ (೧೯೯೭) ಮತ್ತು ಅಪೂರ್ವ ಕಥಾಸಂಗಮ (೨೦೦೧). ಸನಾತನ ಸಂಸ್ಕೃತಿಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಸಾಕಷ್ಟು ಲೇಖನಗಳನ್ನು ಬರೆದಿದ್ದಾರೆ. ಅವೆಲ್ಲ ಸಂಯುಕ್ತ ಕರ್ನಾಟಕ, ಕನ್ನಡ ಪ್ರಭ, ಸುಧಾ ಪತ್ರಿಕೆಗಳಲ್ಲಿ ಪ್ರಕಟವಾಗಿವೆ.

ವಾಗೀಶ್ವರಿ ಅವರು ಮಗನ ಸಂಸಾರವನ್ನು ನೋಡುವ ಸಲುವಾಗಿ ಸಿಂಗಪುರ ಪ್ರವಾಸ (೧೯೯೭) ಕೈಗೊಂಡು ಅಲ್ಲಿ ಆರುತಿಂಗಳು ಇದ್ದುಬಂದರು. ಅದರ ನೆನಪಿನ ಪ್ರವಾಸ ಕಥನವನ್ನೂ ಬರೆದರು. ಮಗಳು ಮೊಮ್ಮಗಳ ಬಾಣಂತನದ ನೆಪದಲ್ಲಿ ಅಮೆರಿಕಾ ಪ್ರವಾಸ ಕೈಗೊಂಡು ಆರು ತಿಂಗಳಿದ್ದು ಬಂದರು (೧೯೯೮). ನ್ಯೂಯಾರ್ಕ್ ಕನ್ನಡ ಕೂಟದವರಿಂದ ಸನ್ಮಾನಕ್ಕೆ ಪಾತ್ರರಾದರು. ವಿದೇಶದಲ್ಲಿ ಶಂಕರ ಮಠದ ಬಗೆಗೆ ಎರಡು ಲೇಖನಗಳನ್ನು ಬರೆದರು.

ವಾಗೀಶ್ವರಿ ಶಾಸ್ತ್ರಿ ಅವರ ಸುದೀರ್ಘ ಜೀವನ ಸಾಧನೆ ಸಮೃದ್ಧವಾಗಿದೆ, ಸದಾಶಯದಿಂದ ಕೂಡಿದೆ.

* * *

ವಾಗೀಶ್ವರಿ ಶಾಸ್ತ್ರಿ

ಬ್ರಾಹ್ಮಣ ಸಮಾಜದ ಮೌಖಿಕ ಪರಂಪರೆಯ ಅಸಂಖ್ಯಾತ ಸಂಪ್ರದಾಯದ ಹಾಡುಗಳನ್ನು ಹಿರಿಯ ಸ್ತ್ರೀಯರಿಂದ ಕಲಿತು, ಜೀವಮಾನವೆಲ್ಲಾ ಸುಶ್ರಾವ್ಯವಾಗಿ ಹಾಡಿ ಪ್ರಸಾರಮಾಡಿ, ಅಗಾಧ ನೆನಪಿನ ಶಕ್ತಿಯಿಂದ ಜೋಪಾನವಾಗಿ ಕಾಪಾಡಿಕೊಂಡು, ಕಂಠಸ್ಥಸಾಹಿತ್ಯವನ್ನು ಅಕ್ಷರಕ್ಕಿಳಿಸಿ, ಹೆಬ್ಬೊತ್ತಗೆಯ ರೂಪದಲ್ಲಿ ಅಚ್ಚುಕಟ್ಟಾಗಿ ಪ್ರಕಟಿಸಿದ ವಾಗೀಶ್ವರಿ ಶಾಸ್ತ್ರಿ ಅವರು ಸಂಪ್ರದಾಯದ ಹಾಡುಗಳ ಮಹಾಕೋಶ. ಮೂಲ ಹಾಡುಗಳು ಹಾಗೂ ಸಾಂಸ್ಕೃತಿಕ ಹಿನ್ನೆಲೆಯ ಅರ್ಥಪೂರ್ಣ ಟಿಪ್ಪಣಿಗಳಿಂದ ಕೂಡಿದ, ಅವರ 'ಹೃದಯ ಸಂಪುಟ : ಸಂಪ್ರದಾಯ ಹಾಡುಗಳು' ಬೃಹತ್ ಗ್ರಂಥ ಬ್ರಾಹ್ಮಣ ಜಾನಪದ ಅಧ್ಯಯನಕಾರರಿಗೆ ಅಕ್ಷಯನಿಧಿ. ಶಿಷ್ಟ ಸಮಾಜದ ಮಹಿಳೆಯರ ಜೀವನದ ಧನ್ಯತೆಗೆ ಸ್ಫೂರ್ತಿಸೆಲೆಯಾದ ಹಾಡುಗಳ ದನಿಬನಿ ಧಾಟಿಲಯಗಳು ವಿಭಿನ್ನವಾಗಿವೆ. ಪ್ರಸ್ತುತ ಗ್ರಂಥದಲ್ಲಿ ವಾಗೀಶ್ವರಿ ಶಾಸ್ತ್ರಿ ಅವರ ಬದುಕು ಬರಹವನ್ನು ಕಾಣಬಹುದು.

ಪ್ರೊ. ಡಿ. ಲಿಂಗಯ್ಯ

ಕರ್ನಾಟಕ ಜಾನಪದ ಪರಿಷತ್ತು

ನಂ.೧, ಜಾನಪದ ಸಿರಿಭುವನ, ಜಲದರ್ಶಿನಿ ಬಡಾವಣೆ,
ಎಂ.ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ, ಹೊಸ ಬಿ.ಇ.ಎಲ್. ರಸ್ತೆ,
ಬೆಂಗಳೂರು – ೫೬೦ ೦೫೪